ಬೆಲೆ ರೂ.2.50
D.O.P - 15th of every month at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ನವೆಂಬರ್ 2015

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-11 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಮಂಟಪದಲ್ಲಿ ಸಂಭ್ರಮದ ನವರಾತ್ರಿ; ವಿಜಯದಶಮಿ

ತಾ.13-10-2015ರಿಂದ ನವರಾತ್ರಿಯು ಆರಂಭವಾಯಿತು. ಅಂದಿನಿಂದ ಶ್ರೀ ಶಾರದಾ ಮಂಟಪದಲ್ಲೂ ಪ್ರತಿನಿತ್ಯ ಹಬ್ಬವನ್ನು ಭಕ್ತಿ, ಸಂಭ್ರಮ ಉಲ್ಲಾಸಗಳಿಂದ ಆಚರಿಸಿ, ವಿಜಯದಶಮಿಯ ದಿನದಂದು ಚಂಡಿಕಾಹೋಮದೊಂದಿಗೆ ಕೊನೆಗೊಳಿಸಲಾಯಿತು. ಹಬ್ಬದ ಪ್ರಯುಕ್ತ ಶ್ರೀ ಶಾರದಾ ಮಂಟಪ ಹಾಗೂ ದೇವಸ್ಥಾನಗಳನ್ನು ಪುಷ್ಪ , ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ರಾತ್ರಿಯ ಹೊತ್ತು ದೇವಸ್ಥಾನಕ್ಕೆ ದೀಪಾಲಂಕಾರವನ್ನೂ ಮಾಡಲಾಗಿತ್ತು. ಒಂಬತ್ತು ದಿನವೂ ಶ್ರೀ ಶಾರದಾ ದೇವಸ್ಥಾನದಲ್ಲಿ ಬೆಳ್ಳಿಯ ಮುಖವಾಡ ಹಾಗೂ ಕಿರೀಟ ಧರಿಸಿ ಸ್ವರ್ಣಾಭರಣಗಳನ್ನು ತೊಟ್ಟು ರಜತ ಸಿಂಹಾಸನದಲ್ಲಿ ಕುಳಿತ ಶ್ರೀ ಶಾರದೆಯನ್ನು ಸಮಾಜ ಬಾಂಧವರು, ಸಂಘದ ಸದಸ್ಯರು, ಸುತ್ತಲಿನ ಹಾಗೂ ದೂರದೂರದ ಊರಿಂದಲೂ ಬಂದ ಭಕ್ತರು ದರ್ಶಿಸಿ ಧನ್ಯತಾ ಭಾವನೆ ಪಡೆದರು. ಮಹಿಳಾ ವೇದಿಕೆಯ ಸದಸ್ಯರಿಂದ ಹಾಗೂ ಭಕ್ತರಿಂದ ಪ್ರತಿ ದಿನವೂ ಭಜನೆ, ಪಾರಾಯಣ, ಅಕ್ಷರಾಭ್ಯಾಸ , ಹೂವಿನ ಪೂಜೆ , ಶ್ರೀ ದೇವಿಗೆ ಸೀರೆ ಸಮರ್ಪಣೆ, ಪ್ರಸಾದ ವಿತರಣೆ ಇತ್ಯಾದಿ ಕಾರ್ಯಕ್ರಮಗಳು ನಡೆದವು.

ತಾ.22-10-2015ರಂದು ಸಂಭ್ರಮದಿಂದ ವಿಜಯದಶಮಿಯನ್ನು ಆಚರಿಸಲಾಯಿತು. ಹಿಂದಿನ ರಾತ್ರಿಯೇ ಚಂಡಿಕಾಹೋಮಕ್ಕೆ ಎಲ್ಲಾ ತಯಾರಿಯನ್ನು ಮಾಡಿಕೊಳ್ಳಲಾಗಿತ್ತು. ಭಕ್ತರು ಈ ಕಾರ್ಯಕ್ರಮಕ್ಕೆ ದೇಣಿಗೆಗಳನ್ನೂ ಹೊರೆಕಾಣಿಕೆಗಳನ್ನೂ ನೀಡಿದ್ದರು. ವಿಜಯದಶಮಿಯ ದಿನ ಬೆಳಿಗ್ಗೆ



ಸುಮಾರು ಏಳು ಗಂಟೆಗೆ ಬ್ರಹ್ಮಶ್ರೀ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವೈ ಭುವನೇಂದ್ರ ರಾವ್, ಕಾರ್ಯದರ್ಶಿ ಕೆ. ಸುರೇಶ ರಾವ್, ಕೋಶಾಧಿಕಾರಿಗಳೂ ಹಾಗೂ ಚಂಡಿಕಾ ಹೋಮದ ಕರ್ತೃಗಳಾದ ಶ್ರೀ ಕೆ.ಸುಧಾಕರ ರಾವ್ ದಂಪತಿಗಳು, ಶ್ರೀ ಎಸ್. ಎಂ ರಾವ್, ಡಾ। ಸುದರ್ಶನ ರಾವ್ ಹಾಗೂ ಸಂಘದ ಇತರ ಸದಸ್ಯರೆಲ್ಲರೂ ದೇವಸ್ಥಾನದಲ್ಲಿ ನೆರೆದು ಸಮಾಜದ ಏಳಿಗೆಗಾಗಿ ನಡೆಸುತ್ತಿರುವ ಚಂಡಿಕಾ ಹೋಮವನ್ನು ಯಶಸ್ವಿಗೊಳಿಸಬೇಕೆಂದು ಶ್ರೀ ದೇವಿಯಲ್ಲಿ ಪ್ರಾರ್ಥಿಸಿದರು. ನಂತರ ಚಂಡಿಕಾಹೋಮ ಆರಂಭವಾಯಿತು.

ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಯಿಂದ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಭಕ್ತಿಗೀತೆ, ಕಂಠಪಾಠ, ಚಿತ್ರರಚನೆ, ರಂಗವಲ್ಲಿ, ಕನಕಧಾರ ಸ್ತೋತ್ರ ಹಾಡುವುದು ಸ್ಪರ್ಧೆಗಳು ನಡೆದವು. ಶಂಖ ಊದುವ ಹಾಗೂ ಚೂರ್ಣಿಕೆ ಹಾಡುವ ಸ್ಪರ್ಧೆಯಲ್ಲಿ ಲಿಂಗ ವಯೋಮಾನ ಭೇಧವಿಲ್ಲದೆ ಎಲ್ಲರೂ ಪಾಲ್ಗೊಂಡರು. ಶ್ರೀ ಹೆರ್ಗ ನಿರಂಜನರಾಯರ ನೇತೃತ್ವದಲ್ಲಿ ಈ ಸ್ಪರ್ಧೆಗಳು ನಡೆದವು. ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ಚಂಡಿಕಾ ಹೋಮದ ಪೂರ್ಣಾಹುತಿ ಹಾಗೂ ಮಂಗಳಾರತಿಯಾಗಿ ನೆರೆದ ಭಕ್ತರೆಲ್ಲರೂ ತೀರ್ಥ ಪ್ರಸಾದ ಸ್ವೀಕರಿಸಿದ ನಂತರ ಅನ್ನ ಸಂತರ್ಪಣೆ ನಡೆಯಿತು. ಸುಮಾರು ಎಂಟುನೂರು ಜನರಿಗೆ ಅನ್ನ ಸಂತರ್ಪಣೆಯಾಯಿತು.

ಮಧ್ಯಾಹ್ನ ಭೋಜನಾನಂತರ ಸಭಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ಕೆ. ಜಗನ್ನಿವಾಸರಾಯರಿಗೆ ಸನ್ಮಾನ, ಸಂಸ್ಥಾಪಕರ ಸ್ಮರಣೆ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ, ಬಹುಮಾನ ವಿತರಣೆ ಕಾರ್ಯಕ್ರಮಗಳು ಜರಗಿದವು.

ಸಂಜೆ ಆರು ಗಂಟೆಗೆ ನಮ್ಮ ಸಮಾಜ ಬಾಂಧವರ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಮಂಡಳಿಯ ಕಲಾವಿದರಿಂದ ಭೀಷ್ಮ ವಿಜಯ-ಅಂಬಾ ಶಪಥವೆಂಬ ಯಕ್ಷಗಾನ ನಡೆಯಿತು. ಅನೇಕ ಕಿರಿಯ ಹಾಗೂ ಹಿರಿಯ ಕಲಾವಿದರು ಇದರಲ್ಲಿ ಭಾಗವಹಿಸಿ ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿದರು. ರಾತ್ರಿ ಶ್ರೀದೇವಿಗೆ ಮಂಗಳಾರತಿ ಮಾಹಾಪೂಜೆ ಯೊಂದಿಗೆ ಅಂದಿನ ಕಾರ್ಯಕ್ರಮ ಕೊನೆ ಗೊಂಡಿತು.

ವಿಜಯದಶಮಿಯ ಆಚರಣೆಯ ಯಶಸ್ಸಿಗಾಗಿ ದುಡಿದ ಎಲ್ಲಾ ಕಾರ್ಯಕರ್ತರಿಗೆ ವೇದಿಕೆಯವರಿಗೆ, ಶೀರ್ಪುಗಾರರಿಗೆ, ದಾನಿಗಳಿಗೆ, ಋತ್ವಿಜರಿಗೆ, ಸೇವಾಕರ್ತೃಗಳಿಗೆ ಅತಿಥಿಗಳಿಗೆ ಆಡಳಿತ ಮಂಡಳಿಯ ವಿಶೇಷ ಕೃತಜ್ಞತೆಗಳು.

## ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಎನ್.ಕೆ. ಜಗನ್ನಿವಾಸ ರಾಯರಿಗೆ ಸನ್ಮಾನ



ಪ್ರಸಿದ್ಧ ನ್ಯಾಯವಾದಿ, ನೋಟರಿ, ನಮ್ಮ ಸಮಾಜದ ಮುಂದಾಳು ಹಾಗೂ ಪುತ್ತೂರಿನ ಪ್ರಸಿದ್ಧ ನಟ್ಟೋಜಿ ಮನೆತನದ ಶ್ರೀ ಎನ್.ಕೆ. ಜಗನ್ನಿವಾಸರಾಯರು ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾದ ಸಂತೋಷವನ್ನು ನಮ್ಮ ಸಂಘದ ಸದಸ್ಯರು ವಿಜಯದಶಮಿಯ ದಿನ ಅವರನ್ನು ಅತಿಥಿಯಾಗಿ ಆಹ್ವಾನಿಸಿ, ಅಭಿನಂದಿಸಿ, ಸನ್ಮಾನಿಸಿ ಆಚರಿಸಿದರು.

ತಾ.22-10-2015ನೇ ಗುರುವಾರ ಚಂಡಿಕಾ ಹೋಮದ ನಂತರ ಎಲ್ಲರೂ ಪ್ರಸಾದಭೋಜನವನ್ನು ಸ್ವೀಕರಿಸಿದ ನಂತರ ಆನಂದರಾವ್ ಹಾಲ್‌ನಲ್ಲಿ ಈ ಕಾರ್ಯಕ್ರಮ ನೆರವೇರಿತು. ಶ್ರೀ ಪ್ರವೀಣ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಡಾ.ವೈ. ಸುದರ್ಶನ್ ರಾವ್‌ರವರು ಎಲ್ಲರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಮೊದಲಿಗೆ ದೀಪ ಬೆಳಗಿಸಿ ಕಾರ್ಯಕ್ರಮನ್ನು ಉದ್ಘಾಟಿಸಲಾಯಿತು. ನಂತರ ಶ್ರೀ ಕೆ.ಸುಧಾಕರ ರಾಯರು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟುಗೆ ಐವತ್ತು ವರ್ಷಗಳಾಗುತ್ತಿರುವ

(3ನೇ ಪುಟಕ್ಕೆ...)

## ವಿಜಯದಶಮಿಯಂದು ಮಿಂಚಿದ ಶ್ರೀಶಾರದಾ ಯಕ್ಷಗಾನ ಕಲಾವಿದರು



ಪ್ರತೀ ವರ್ಷದಂತೆ ಈ ವರ್ಷವೂ ಕೂಡಾ ಶರನ್ನವರಾತ್ರಿಯ ಆಚರಣೆಯ ಕೊನೆಯ ದಿನ ವಿಜಯದಶಮಿ (ದಿನಾಂಕ.22-10-2015)ಯಂದು ಶ್ರೀ ಶಾರದಾ ಮಂಟಪದಲ್ಲಿ ಇಡೀ ದಿನ ಸಂಭ್ರಮದಿಂದ ಹಬ್ಬವನ್ನು ಆಚರಿಸಲಾಯಿತು. ಆ ದಿನ ಮಕ್ಕಳಿಗಾಗಿ, ಕಂಠಪಾಟ ಇತ್ಯಾದಿ ಸ್ಪರ್ದೆಗಳು, ಚಂಡಿಕಾ ಹೋಮ ಭೋಜನಕೂಟ, ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿವೇತನ ವಿತರಣೆ ಇತ್ಯಾದಿಗಳು ನಡೆದು ಸಂಜೆ ಘಂಟೆ.6-30ರಿಂದ ನಮ್ಮ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ಭೀಷ್ಮವಿಜಯ-ಅಂಬಾ ಶಪಥ ಎಂಬ ಆಖ್ಯಾನದ ಯಕ್ಷಗಾನ ಬಯಲಾಟ ಕಾರ್ಯಕ್ರಮವು ಅದ್ದೂರಿಯಿಂದ ನಡೆಯಿತು.

ಹಿಮ್ಮೇಳದಲ್ಲಿ ನಮ್ಮವರೇ ಆದ ಶ್ರೀ ಚಂದ್ರಕಾಂತ ರಾವ್, ಮೂಡುಬೆಳ್ಳೆ, ಇವರು ಭಾಗವತರಾಗಿಯೂ, ಶ್ರೀ ದೇವದಾಸ್ ರಾವ್, ಕೂಡ್ಲಿ, ಇವರು ಮೃದಂಗ ವಾದಕರಾಗಿಯೂ ಶ್ರೀ ಕೋಟ ಶಿವಾನಂದ, ಇವರು ಚೆಂಡೆವಾದಕರಾಗಿಯೂ ಸಹಕರಿಸಿ ಮುಮ್ಮೇಳದ ಕಲಾವಿದರಿಗೆ ಸ್ಫೂರ್ತಿಯನ್ನಿತ್ತು ತಮ್ಮ ಕರ್ತವ್ಯವನ್ನು ಚೆನ್ನಾಗಿಯೇ ನಿರ್ವಹಿಸಿದರು. ಪಾತ್ರಧಾರಿಗಳಾಗಿ, ಶ್ರೀ

(3ನೇ ಪುಟಕ್ಕೆ...)

# ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

ಪ್ರತೀ ವರ್ಷದಂತೆ ಈ ವರ್ಷವೂ ಕನ್ನಡ ರಾಜ್ಯೋತ್ಸವ ಜರಗಿತು. ಇದು ಅರವತ್ತನೇ ರಾಜ್ಯೋತ್ಸವ. ಆದರೆ ರಾಜ್ಯೋತ್ಸವದ ಸಂಭ್ರಮದ ಮೇಲೆ ಕನ್ನಡ ಬಲ್ಲವರ, ಓದುವವರ ಸಂಖ್ಯೆ ಕನ್ನಡಿಗರಲ್ಲೆ ಗಣನೀಯವಾಗಿ ಕಡಿಮೆಯಾಗುತ್ತಿರುವುದರ ಕರಾಳ ಛಾಯೆ ವರ್ಷ ಕಳೆದಂತೆ ದಟ್ಟವಾಗುತ್ತಿದೆ. ಗಮನಿಸಬೇಕು, ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿದೆಯೆನ್ನುತ್ತಿಲ್ಲ. ಕನ್ನಡ ಬಲ್ಲ ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿದೆ.ಅದೂ ಅತೀ ವೇಗದಲ್ಲಿ ಕಡಿಮೆಯಾಗುತ್ತಿದೆ. ಇದು ಕನ್ನಡ ಸಂಸ್ಕೃತಿ ಬಡವಾಗುತ್ತಿರುವ ಸಂಕೇತ.

ಇಂಗ್ಲೀಷು ಮಾಧ್ಯಮದಲ್ಲಿ ಮಕ್ಕಳು ಶಿಕ್ಷಣ ಪಡೆಯಬೇಕಾಗಿರುವುದು ಈಗಿನ ಅನಿವಾರ್ಯತೆ. ಜಾಗತೀಕರಣಕ್ಕೆ ಕೊರಳೊಡ್ಡಿದ ಮೇಲೆ ಅದಕ್ಕೆ ತಯಾರಾಗಿರಬೇಕಲ್ಲವೇ. ಆದರೆ ಇಂಗ್ಲೀಷು ಮಾಧ್ಯಮದ ಶಿಕ್ಷಣದಿಂದಾಗಿ ಕನ್ನಡ ತಾಯಿಯ ಮಕ್ಕಳು ಕನ್ನಡದಲ್ಲಿ ಸಂವಹನ ನಡೆಸಲು ಅಸಮರ್ಥರೆನಿಸುವಷ್ಟು ಕನ್ನಡದ ಸಂಪರ್ಕ ಕಳೆದುಕೊಳ್ಳುತ್ತಿದ್ದಾರೆ ಎಂಬುದು ಅರಗಿಸಲಾಗದ ಸತ್ಯವಾಗಿದೆ. ಇದುವೇ ನಮ್ಮ ಕನ್ನಡ ಭಾಷೆ ಬಡವಾಗಲು ಕಾರಣ. ಕೆಲವು ಶಾಲೆಗಳಂತೂ ಕನ್ನಡದಲ್ಲಿ ಮಾತನಾಡಿದ ಮಕ್ಕಳಿಗೆ ದಂಡ ವಿಧಿಸುವಷ್ಟು ಅಭಿಮಾನ ಶೂನ್ಯವಾಗಿವೆ.

ಈವಾಗ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಹೆತ್ತವರು ಒಂದಿಷ್ಟು ಈ ಬಗ್ಗೆ ಗಮನ ಹರಿಸಬೇಕಾದ ಕಾಲ ಖಂಡಿತಾ ಬಂದಿದೆ. ಗಮನಿಸಿ, ಶಾಲೆಯಲ್ಲಿ ಕನ್ನಡ ಕಲಿಸುವುದಿಲ್ಲ, ಕಲಿಸಿದರೂ ಅದು ಮೂರನೇ ಪಠ್ಯ ! ಮನೆಯಲ್ಲೂ ಇಂಗ್ಲೀಷು ಮಾತನಾಡಿ ಎಂಬ ಪ್ರೇರಣೆ ಬೇರೆ. ಇದರ ಪರಿಣಾಮವೆಷ್ಟಿದೆಯೆಂದರೆ ಮಕ್ಕಳಿಗೆ ಮಹಾಭಾರತದಂತಹ ಕಥೆ ಪುಸ್ತಕಗಳನ್ನು ಸಹಾ ಓದಲು ಕೊಟ್ಟರೆ ಇಂಗ್ಲೀಷ್ ಭಾಷೆಯದ್ದು ತರಬೇಕಿತ್ತು ಎನ್ನುವುದು ಎಲ್ಲರ ಮನೆಯಲ್ಲಿ ಬರುವ ಸಾರ್ವತ್ರಿಕ ಪ್ರತಿಕ್ರಿಯೆ. ಈ ಪ್ರತಿಕ್ರಿಯೆಯಲ್ಲಿ ಕನ್ನಡದ ಭವಿಷ್ಯದ ಕಲ್ಪನೆ ಮಾಡಬಹುದು.

ಆದುದರಿಂದ ಮಕ್ಕಳಿಗೆ ಕನ್ನಡ ಕಲಿಸುವ ಕೆಲಸವನ್ನು ಹೆತ್ತವರೇ ಕೈಗೆತ್ತಿಕೊಳ್ಳಬೇಕು. ಮನೆಯಲ್ಲಿ ಕನ್ನಡದ ದಿನಪತ್ರಿಕೆ, ಮಾಸಪತ್ರಿಕೆ ತರಿಸಿ ಓದಲು ಪ್ರೇರೇಪಿಸಿ. ಮಕ್ಕಳ ಆಸಕ್ತಿಯ ಕಥೆ ಹಾಗೂ ಕಾಮಿಕ್ಸ್ ಪುಸ್ತಕಗಳು ಕನ್ನಡದ್ದಾಗಿರಲಿ. ಶಾಲೆಯ ಅಥವಾ ಸಂಘ ಸಂಸ್ಥೆಗಳ ಕನ್ನಡ ಭಾಷಣ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಹುರಿದುಂಬಿಸಿ. ಮನೆಯಲ್ಲಿ ಕನ್ನಡವನ್ನೆ ಮಾತನಾಡಿರಿ.ಹಾಗಿದ್ದರೆ ಮಾತ್ರ ಅದು ಮಾತೃಭಾಷೆಯಾಗುತ್ತದೆ.

ಶ್ರೀ ಶಾರದಾ ಪತ್ರಿಕೆಯೂ ಕಳೆದ ಹದಿನೈದು ವರ್ಷಗಳಿಂದ ಕನ್ನಡ ತಾಯಿಯ ಸೇವೆಗೈಯುತ್ತಿದೆ. ಓದಲು ಆಸಕ್ತಿ ಹುಟ್ಟಿಸುವಂತಹಾ ಸರಳ ಭಾಷೆಯ ಬರಹಗಳು ಇದರಲ್ಲಿ ಪ್ರಕಟವಾಗುತ್ತಿವೆ. ಕೇವಲ ಕನ್ನಡ ಮಾತ್ರವಲ್ಲ ಬ್ರಾಹ್ಮಣ ಸಂಸ್ಕೃತಿಯ ಪರಿಚಯವನ್ನೂ ಇದು ಮಾಡಿಕೊಡುತ್ತಿದೆ. ಆದರೆ ಸಂಪಾದಕರು ಗಮನಿಸಿದಂತೆ ಇದರ ಚಂದಾದಾರರ ಪಟ್ಟಿಯಲ್ಲಿ ಯುವಕರ ಹೆಸರಿಗಿಂತ ಹಿರಿಯರ ಹೆಸರೇ ಹೆಚ್ಚಿದೆ. ಪ್ರಾಥಮಿಕ ಶಾಲೆಗೆ ಹೋಗುತ್ತಿರುವ ಮಕ್ಕಳ ಹೆತ್ತವರು ‘ಶ್ರೀ ಶಾರದೆ’ಯ ಚಂದಾದಾರರಾದರೆ ತಮ್ಮ ಮಕ್ಕಳಿಗೆ ಇದನ್ನು ಓದಿಸಿ ಕನ್ನಡದೊಂದಿಗೆ ಬ್ರಾಹ್ಮಣ ಸಂಸ್ಕೃತಿಯ ಪರಿಚಯವನ್ನೂ ಮಾಡಿಕೊಡಬಹುದು ಎಂಬುದು ನಮ್ಮ ಸಲಹೆ. ಆದುದರಿಂದ ದೂರದೂರಿನಲ್ಲಿ ಕೆಲಸದ ನಿಮಿತ್ತ ತೆರಳಿರುವ ನಮ್ಮ ಸಮಾಜದ ಯುವಕರೇ ಶ್ರೀ ಶಾರದಾ ಪತ್ರಿಕೆಯ ಚಂದಾದಾರರಾಗಿ ಶ್ರೀ ಶಾರದೆಯನ್ನು ಮನೆಗೆ ಬರಮಾಡಿಕೊಳ್ಳಿ.

**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-3

# ಕೊಕ್ರಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ, ಬೆಳ್ತಂಗಡಿ ತಾಲೂಕು

– ಶ್ರೀ ಕೃಷ್ಣರಾಜ ಭಟ್



ಎಂಟು ನೂರು ವರ್ಷಗಳ ಹಿಂದೆ ಕಾರ್ಕಳದ ಬೈರವ ಅರಸರ ಆಡಳಿತಕ್ಕೆ ಒಳಪಟ್ಟಿರುವ ನಾರಾವಿ ಮಾಗಣೆಗೆ ಸೇರಿದ ಶಾಲಿಪುರ (ಸಾಲ್ಯೂರು) ಎಂಬಲ್ಲಿ ಪ್ರತಿಷ್ಠಾಪಿಸಲ್ಪಟ್ಟ ದೇವಸ್ಥಾನವಿದು. ಅಂದಿನಿಂದಲೂ ಈ ದೇವಸ್ಥಾನವು ಸ್ಥಾನಿಕ ಬ್ರಾಹ್ಮಣರ ಆಡಳಿತ, ಅರ್ಚಕತನದಲ್ಲೇ ನಡೆಯುತ್ತಿದೆ. ಅಪೂರ್ವ ಶಿಲ್ಪಕಲಾ ಸೌಂದರ್ಯವನ್ನು ಹೊಂದಿದ ಶ್ರೀ ಬಾಲ ಸುಬ್ರಹ್ಮಣ್ಯನ ಮೂರ್ತಿಯು ಇಲ್ಲಿ ಆರಾಧ್ಯಮೂರ್ತಿಯಾಗಿ ಕಂಗೊಳಿಸುತ್ತಿದೆ.

ಕಾರ್ಕಳದಿಂದ ನಾರಾವಿಯ ಮೂಲಕ ಗುರುವಾಯನಕೆರೆಗೆ ಹಾದುಹೋಗುವ ರಾಜ್ಯ ಹೆದ್ದಾರಿಯಲ್ಲಿ ನಾರಾವಿಯಿಂದ ಐದು ಕಿ.ಮೀ ದೂರ ಹಾಗೂ ಗುರುವಾಯನಕೆರೆಗೆ ಹದಿನೇಳು ಕಿ.ಮೀ. ಇರುವಾಗ ಸುಲ್ಕೇರಿ ಹಳ್ಳಿಯಲ್ಲಿ ಬಲಕ್ಕೆ ತಿರುಗಿ ಸುಮಾರು ಒಂದೂವರೆ ಕಿ.ಮೀ. ಸಾಗಿದರೆ ನಯನ ಮನೋಹರ ಪ್ರದೇಶದಲ್ಲಿ ಕೊಕ್ರಾಡಿ ಗ್ರಾಮ ಹಾಗೂ ದೇವಸ್ಥಾನ ಸಿಗುತ್ತದೆ. ಇದೇ ರಸ್ತೆಯಲ್ಲಿ ಮುಂದೆ ಸಾಗಿದರೆ ವೇಣೂರು ಮೂಡಬಿದರೆ ತಲುಪಬಹುದು.

ಈ ದೇವಸ್ಥಾನದ ಪ್ರಧಾನ ದೇವರು ಶ್ರೀ ಬಾಲ ಸುಬ್ರಹ್ಮಣ್ಯ. ಉಪದೇವತೆಯಾಗಿ ಮಹಾಗಣಪತಿಯನ್ನು ಹಾಗೂ ಮೂಲಶಕ್ತಿಯಾಗಿ ಶ್ರೀ ನಾಗದೇವರನ್ನು ಪ್ರತಿಷ್ಠಾಪಿಸಲಾಗಿದೆ. ಈ ಪುಣ್ಯಕ್ಷೇತ್ರದಲ್ಲಿ ಕೊಡಮಣಿತ್ತಾಯ ಪಂಜುರ್ಲಿ ಮತ್ತು ರಕ್ತೇಶ್ವರಿಯಾದಿ ಪಂಚದೈವಗಳ ಸಾನ್ನಿಧ್ಯವಿದೆ.

ಜೀರ್ಣಗೊಂಡಿದ್ದ ದೇವಳವನ್ನು ಸುಮಾರು 85 ಲಕ್ಷ ರೂಗಳ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಗೊಳಿಸಿ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಪುನಪ್ರತಿಷ್ಠೆ, ಬ್ರಹ್ಮಕಲಶೋತ್ಸವಗಳನ್ನು ನೆರವೇರಿಸಲಾಗಿದೆ. ಶ್ರೀ ಕ್ಷೇತ್ರದಲ್ಲಿ ಶ್ರದ್ಧಾಭಕ್ತಿಯಿಂದ ಪ್ರಾರ್ಥಿಸಿಕೊಂಡಲ್ಲಿ ಚರ್ಮರೋಗ, ಸರ್ಪದೋಶ , ಕುಷ್ಟರೋಗಗಳು ನಿವಾರಣೆಯಾದ ಹಾಗೂ ಸಂತಾನ, ಉದ್ಯೋಗ ವಿವಾಹಾದಿಗಳಲ್ಲಿ ಭಕ್ತರ ಅಭೀಷ್ಟ ಸಿದ್ಧಿಯಾದ ಪ್ರತ್ಯಕ್ಷ ನಿದರ್ಶನಗಳಿರುವ ಮಹಿಮೆ ಈ ಕ್ಷೇತ್ರದ್ದು.

ಪ್ರತೀ ತಿಂಗಳ ಶುಕ್ಲ ಮತ್ತು ಕೃಷ್ಣ ಪಕ್ಷದ ಪಂಚಮಿ ಹಾಗೂ ಷಷ್ಠಿ ತಿಥಿಗಳಲ್ಲಿ ವಿಶೇಷ ಪೂಜೆ ಹಾಗೂ ಅನ್ನದಾನವು ನಡೆಯುತ್ತದೆ. ಶ್ರೀ ದೇವರ ಚಂಪಾಷಷ್ಠ್ಯುತ್ಸವವು ಪ್ರತೀ ವರ್ಷವೂ ಬಹಳ ವಿಜೃಂಭಣೆಯಿಂದ ನೆರವೇರುತ್ತದೆ.

ಪ್ರಸ್ತುತ ಈ ದೇವಸ್ಥಾನದ ವ್ಯವಸ್ಥಾಪನಾ ಸೇವಾ ಸಮಿತಿಯ ಅಧ್ಯಕ್ಷರಾಗಿ ಶ್ರೀ ಎಮ್.ಎಸ್.ಅರುಣ್ ಕುಮಾರ್ ಇವರು ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಭಟ್ ಇವರು ಇಲ್ಲಿಯ ಪ್ರಧಾನ ಅರ್ಚಕರಾಗಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಲೇಖಕರನ್ನು 9980195355 ನಲ್ಲಿ ಸಂಪರ್ಕಿಸಬಹುದು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ “ಗೃಹ ಸಾಲ” (ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 10% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 10.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ – ☎ 2522408 ಕುಕ್ಕಿಕಟ್ಟೆ ಶಾಖೆ – ☎ 2592133
ಪಡುಬಿದ್ರಿ ಶಾಖೆ – ☎ 2556608 ಕೋಟೇಶ್ವರ ಶಾಖೆ – ☎ 9341854114

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

**ವೈವಾಹಿಕ ಬೆಳ್ಳಿ ಹಬ್ಬದ ಶುಭಾಶಯಗಳು**



ಶ್ರೀಮತಿ ಪ್ರಭಾ ಮತ್ತು
ಶ್ರೀ ಬಿ. ಶ್ರೀಪತಿ ರಾವ್, ಪಡುಬೆಳ್ಳೆ
“ಶ್ರೀದೇವಿ ನಿಲಯ”, ಕುಂಜಾರುಗಿರಿ

ಹಾಲು-ಜೇನಿನಂತಹ ನಿಮ್ಮ ಸುಮಧುರ
ದಾಂಪತ್ಯದ ಬೆಳ್ಳಿಹಬ್ಬದ ಈ ಸಂದರ್ಭದಲ್ಲಿ
ಶ್ರೀದೇವಿಯು ನಿಮಗೆ ಆಯುರಾರೋಗ್ಯ
ನೀಡಿ ಹರಸಲಿ ಎಂದು ಪ್ರಾರ್ಥಿಸುವ,

ಶ್ರೀ ಅಭಿಷೇಕ್ ರಾವ್ (ಪುತ್ರ)
ಕು| ಅರ್ಚನಾ (ಪುತ್ರಿ)
ಶ್ರೀ ಕೃಷ್ಣಮೂರ್ತಿರಾವ್ ಮತ್ತು ಸಹೋದರರು

# ವಿಜಯದಶಮಿಯ ವಿವಿಧ ಸ್ಪರ್ಧೆಗಳು ಹಾಗೂ ಪ್ರತಿಭಾ ಪುರಸ್ಕಾರ

ವಿಜಯದಶಮಿಯಂದು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಸಾಧನೆ ಹಾಗೂ ಪದವಿಯಲ್ಲಿ ರ‍್ಯಾಂಕ್ ವಿಜೇತರಿಗೆ ಉದಯಚಂದ್ರ ಪುರಸ್ಕಾರವನ್ನೂ, ಸ್ನಾತಕೋತ್ತರ ಪದವಿಯಲ್ಲಿ ರ‍್ಯಾಂಕ್ ವಿಜೇತರಿಗೆ ಅಂಬಲ್ಪಾಡಿ ಕೃಷ್ಣರಾವ್ ಪುರಸ್ಕಾರವನ್ನೂ ನೀಡಲಾಯಿತು.

ಈ ಪುರಸ್ಕಾರ ಪಡೆದವರ ವಿವರ ಹೀಗಿದೆ :
**ಎಸ್.ಎಸ್.ಎಲ್.ಸಿ. :** ಕೆ. ಶ್ರೇಯಾ ರಾವ್,
**ಪಿಯುಸಿ ವಿಜ್ಞಾನ :** ಕೆ. ಕ್ಷಮಾ ರಾವ್,
**ಪಿಯುಸಿ ವಾಣಿಜ್ಯ :** ಸುನಿಧಿ ಕೆ.

ದಿ| ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ಪುರಸ್ಕಾರ ಪಡೆದವರು-ಶ್ರೀಮತಿ ಶ್ರೀಪ್ರಿಯಾ.

ಹಾಗೆಯೇ ತಾ.22-10-2015ರಂದು ಶ್ರೀ ಶಾರದಾ ಮಂಟಪದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ಜರಗಿದವು. ಸಂಘದ ಸದಸ್ಯರು ಉತ್ಸಾಹದಿಂದ ಭಾಗವಹಿಸಿದರು. ವಿಜೇತರಿಗೆ ಬಹುಮಾನವನ್ನು ಶ್ರೀ ವೈ.ಮೋಹನ್ ರಾವ್ ಹಾಗೂ ಶ್ರೀಮತಿ ಸುನಂದಾ ಸಿ.ಎಸ್. ರಾವ್‌ರವರು ಪ್ರಾಯೋಜಿಸಿದ್ದರು. ಟಿ. ಜಗದೀಶ ರಾವ್‌ರವರು ರಂಗವಲ್ಲಿ ಸ್ಪರ್ಧೆಯ ಪರಿಕರಗಳನ್ನು ಪ್ರಾಯೋಜಿಸಿದ್ದರು. ಬಹುಮಾನ ಪಡೆದವರ ವಿವರ ಹೀಗಿದೆ:

**ಭಕ್ತಿಗೀತೆ ಸ್ಪರ್ಧೆಗಳು :** (4ನೇ ತರಗತಿ ವರೆಗೆ) 1) ನಿಹಾರಿಕಾ 2) ಮಯೂರ್ ರಾವ್ 3) ಸ್ಕಂದಕುಮಾರ್

**ಭಕ್ತಿಗೀತೆ ಸ್ಪರ್ಧೆಗಳು :** (5 ರಿಂದ 7 ತರಗತಿ ವರೆಗೆ) 1) ಶ್ರೇಯಾ ರಾವ್ 2) ಅಕ್ಷತಾ 3) ಆದಿತ್ಯ ರಾವ್

**ಭಕ್ತಿಗೀತೆ ಸ್ಪರ್ಧೆಗಳು :** (8ನೇ ತರಗತಿ ಮೇಲ್ಪಟ್ಟು) 1) ಮಾನಸ ರಾವ್ 2) ಸುದೇಷ್ಣ 3) ಶುಭಾಂಜನ

**ಚಿತ್ರಕಲೆ :** (4ನೇ ತರಗತಿ ವರೆಗೆ) 1) ಪ್ರಣವ್ ಭಂಡಿ 2) ಹೃತಿಕ್ ರಾವ್ 3) ಸ್ಕಂದ ಕುಮಾರ್

**ಚಿತ್ರಕಲೆ :** (5ರಿಂದ 7ನೇ ತರಗತಿ ವರೆಗೆ) 1) ಅದಿತಿ 2) ಆದಿತ್ಯ ರಾವ್ 3) ಪ್ರೇರಣಾ ಎಮ್. ರಾವ್

**ಚಿತ್ರಕಲೆ :** (8ನೇ ತರಗತಿ ಮೇಲ್ಪಟ್ಟು) 1) ಶರಧಿ 2) ಸ್ವಾತಿ

**ರಂಗವಲ್ಲಿ :** (4ನೇ ತರಗತಿ ವರೆಗೆ) 1) ಮಯೂರ್ ರಾವ್ 2) ಅದ್ವಿತ್ ಹೆಬ್ಬಾರ್

**ರಂಗವಲ್ಲಿ :**(5 ರಿಂದ 7 ತರಗತಿ ವರೆಗೆ) 1) ಪ್ರೇರಣಾ ಎಮ್.ರಾವ್ 2) ಅಕ್ಷತಾ ಡಿ.ಹೆಬ್ಬಾರ್ 3) ಹಿಮಾನಿ

**ರಂಗವಲ್ಲಿ :** (8ನೇ ತರಗತಿ ನಂತರ) 1) ಮಹಿಮಾ 2) ರಕ್ಷಿತಾ 3) ಸಾವಿತ್ರಿ ಹೆಬ್ಬಾರ್

**ಕಂಠಪಾಠ ಸ್ಪರ್ಧೆ :** (7ನೇ ತರಗತಿ ವರೆಗೆ) 1) ಸಮನ್ವಿತಾ

**ಕಂಠಪಾಠ ಸ್ಪರ್ಧೆ :** (8ನೇ ತರಗತಿ ಮೇಲ್ಪಟ್ಟು) : 1) ವೈ. ಮಾನಸ ರಾವ್ 2) ಸ್ವಾತಿ 3) ಆದರ್ಶ್ ವಿ.ರಾವ್

**ಚೂರ್ಣಿಕೆ ಹೇಳುವುದು :** 1) ಗಾಯತ್ರಿ ಶಾಸ್ತ್ರಿ 2) ಭಾರತಿ 3) ಪ್ರಸನ್ನ ವಿ.ರಾವ್

**ಕನಕಾಧಾರ ಸ್ತೋತ್ರ ಹಾಡುವುದು :** 1) ವಿದ್ಯಾ ಎಸ್. ರಾವ್ 2) ಗಾಯತ್ರಿ ಶಾಸ್ತ್ರಿ 3) ಪ್ರಸನ್ನ ವಿ.ರಾವ್

**ಶಂಖ ಊದುವುದು (ಗಂಡಸರು) :** 1) ಸುಹಾಸ್ ರಾವ್ 2) ಕೆ. ಸುರೇಶ್ ರಾವ್ 3) ಕೌಶಿಕ್ ಎನ್.

**ಶಂಖ ಊದುವುದು (ಹೆಂಗಸರು) :** 1) ಜಯಶ್ರೀ ಗಣೇಶ್ 2) ಪ್ರಸನ್ನ 3) ಸುಧಾ ಗಣೇಶ್

ಈ ಎಲ್ಲಾ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಆಗಮಿಸಿದ ಡಾ| ವೈ. ರವೀಂದ್ರನಾಥ ರಾವ್, ಮೀರಾ ರಾಜೇಶ್ ರಾವ್, ವೈ. ಮೋಹನ್ ರಾವ್, ಗಾಯತ್ರಿ ದಿನಮಣಿ ಶಾಸ್ತ್ರಿ, ಮಹೇಶ ಸುತಾರ, ಕೃಷ್ಣಮೂರ್ತಿ ರಾವ್ ಹಾಗೂ ಇತರರಿಗೆ ಧನ್ಯವಾದಗಳು. ಕಾರ್ಯಕ್ರಮವನ್ನು ನಿರ್ವಹಿಸಿದ ಶ್ರೀ ಹೆರ್ಗಾ ನಿರಂಜನ್ ರಾವ್, ಟಿ. ಜಗದೀಶ ರಾವ್, ವಸಂತರಾವ್ ಕರಂಬಳ್ಳಿ, ಶ್ರೀಮತಿ ವಿನುತ, ಡಾ| ಅಮಿತ ಶೋಭಾ ರಾವ್ ಹಾಗೂ ಇತರರಿಗೆ ಧನ್ಯವಾದಗಳು.

ಅದೇ ದಿನ ಪಿಯುಸಿ, ಪದವಿ ಹಾಗೂ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ರೂ.3,10,000/-ಗಳಷ್ಟು ಮೊತ್ತದ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಕಾಸರಗೋಡು : ವಾರ್ಷಿಕ ಸಮಾವೇಶ-2015

ಇಂದು ದೇಶದ ಮುಂದಿರುವ ಸವಾಲುಗಳನ್ನು ಇದಿರಿಸಲು ಸಮಾಜಗಳು ಒಗ್ಗಟ್ಟಿನಿಂದ ಶ್ರಮಿಸಬೇಕು. ನಮ್ಮ ಸಮಾಜ ಒಗ್ಗಟ್ಟಿನಿಂದ ಇದ್ದರೆ ಮಾತ್ರವೇ ನಾವು ರಾಷ್ಟ್ರದ ಪುರೋಗಮನದಲ್ಲಿ ಸಹಕರಿಸಲು ಸಾಧ್ಯವಾಗುತ್ತದೆ ಎಂದು ಪುತ್ತೂರಿನ ಖ್ಯಾತ ನ್ಯಾಯವಾದಿಗಳೂ ಧಾರ್ಮಿಕ ಮುಖಂಡರೂ ಕರ್ನಾಟಕ ಸರಕಾರದ ಧಾರ್ಮಿಕ ಪರಿಷತ್ತಿನ ಸದಸ್ಯರೂ ಆದ ಶ್ರೀ ಎನ್.ಕೆ. ಜಗನ್ನಿವಾಸ ರಾವ್ ಅಭಿಪ್ರಾಯಪಟ್ಟರು. ಅವರು 20ನೆಯ ಜಿಲ್ಲಾ ಸ್ಥಾನಿಕ ಬ್ರಾಹ್ಮಣ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಸಂಘದ ಮುಖವಾಣಿಯಾದ ''ಶಿವಗಂಗಾ''ದ ವಾರ್ಷಿಕ ಸಂಚಿಕೆಯನ್ನು ಕಾಞಂಗಾಡಿನ ದೀಪಾ ನರ್ಸಿಂಗ್ ಹೋಮ್‌ನ ನಿರ್ದೇಶಕಿ ಡಾ| ಶಶಿರೇಖ ಬಿಡುಗಡೆಗೊಳಿಸಿದರು. ಡಾ| ಶಶಿಧರ ರಾವ್ ಅವರು ಮುಖ್ಯ ಅತಿಥಿಯಾಗಿದ್ದರು. ಸಂಘದ ಅಧ್ಯಕ್ಷರಾದ ಡಾ| ಸತ್ಯನಾಥ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಸರಗೋಡು ಜಿಲ್ಲಾ ಬ್ರಾಹ್ಮಣ ಪರಿಷತ್ತಿನ ಕಾರ್ಯದರ್ಶಿ ಶ್ರೀ ಪರಮೇಶ್ವರನ್ ಶುಭಾಶಂಸನೆ ಮಾಡಿದರು.

ಕಾರ್ಯಕ್ರಮದಲ್ಲಿ ಡಾ| ಸತ್ಯನಾಥ್ ಅವರಿಗೆ ''ಸಮಾಜರತ್ನ'', ಶ್ರೀ ಜಗದೀಶ ಪಾರೆಕಟ್ಟ ಇವರಿಗೆ ''ಸಮಾಜ ಸೇವಾ'', ಶ್ರೀ ಆಕಾಶ ಕೂಡ್ಲು ಇವರಿಗೆ ''ಕಲಾತಿಲಕ'', ಮಾ| ರಾಹುಲ್‌ರವರಿಗೆ ''ಲಲಿತಕಲಾ'', ಆಶಿಶ್ ಕೃಷ್ಣ ಕೊಲ್ಲಂಗಾನ ಇವರಿಗೆ ''ಚಿತ್ರಕಲಾ'' ಪ್ರಶಸ್ತಿಯನ್ನಿತ್ತೂ ಗೌರವಿಸಲಾಯಿತು. ಗಮಕ ಸಾಹಿತ್ಯದಲ್ಲಿ ಡಾಕ್ಟರೇಟ್ ಪಡೆದ ಡಾ| ಶಶಿರಾಜ ನೀಲಂಗಳ ಹಾಗೂ ಎಂ.ಸಿ.ಎ.ಯಲ್ಲಿ ದ್ವಿತೀಯ ರ‍್ಯಾಂಕ್ ವಿಜೇತೆ ವಿ.ಪಿ.ನವ್ಯಾರನ್ನೂ ಅಭಿನಂದಿಸಲಾಯಿತು. ಸಮಾಜದ ಹಿರಿಯರಾದ ಪ್ರೇಮಾ ಶ್ಯಾನುಭಾಗ್ ಮತ್ತು ಯಶೋದ ಬಜಕೂಡ್ಲು ಅವರಿಗೆ ಗೌರವಾರ್ಪಣೆ ಮಾಡಲಾಯಿತು.

(ಕೊನೆಯ ಪುಟಕ್ಕೆ...)

## ಕವನಗಳು

### ಬ್ರಾಹ್ಮಣೆರೆ ತುಳು ವಚನೊ

ಸಾಲ ಸಾಲಾಂತ್‌ತ್
ಬೋಡೋ ಗೌಜಿದ ಮದಿಮೆ
ಮಾಣೆಲ, ಜೇವುಲ
ನೆಮ್ಮದಿಟ್ ಬದುಕೊಡೊ?
ಸರಳ ಮದಿಮೆನೆ
ಇಂದೆಕೊಂಜಿ ಪರಿಹಾರೊ
ಬಾಲಗೋಪಾಲ.

ಆಯನಾಯನ ಗುಣೊಲ
ವಣಸ್, ತಿನಸ್‌ಟೆ ಉಂಡು
ಮನಸ್ಸ್ ಗೊಪ್ಪುಣ ತಿನಸ್
ಹಿತವಾತ್, ಮಿತವಾತ್
ಎಡ್ಡೆ ತಿನಸ್‌ನ್ ತಿನ್ಲ
ಬಾಲಗೋಪಾಲ.

ಕಳಿ ಮಾರುನಂಗಡಿಟ್
ಪೇರ್ ಪರೊಂದಿತ್‌ತಿಂಟಲ
ಸೂಪುನಾಯೆಲ ಪನ್ಪೆ
ಆಯೆ ಕಳಿ ಪರೊಂದುಳ್ಳೆ
ಸ್ಥಾನೊ, ಮಾನೊನು ತೆರಿಲ.
ಬಾಲಗೋಪಾಲ.

ಮದಿಮಾಯನ ಮನಸ್
ಸರಿಯಾತು ತೆರಿಯೊಂತು
ಹೊಂದಿಕೆಲ ಅಂತೊಂತು
ಒಂಜಾತ್ ನಡತ್ತ್‌ಂಟ
ಇತ್ತಿಲ್ಲೇ ತಾ ಸ್ವರ್ಗೊ
ಬಾಲಗೋಪಾಲ.

**-ಕೆ ಗೋಪಾಲರಾವ್, ಕಡಬ.**

### ದೇವರ ಕಾಡು

ನಾಗ ಬನಗಳಿಂದ
ನೀನಾಗಿದ್ದೆ ಸಸ್ಯ ಶ್ಯಾಮಲೆ
ಎನಿಸಿಕೊಂಡೆ
ದೇವರ ಕಾಡು
ನಾಗ ಗುಡಿಗಳಿಂದ
ನೀನಾದೆ
ಕಾಂಕ್ರೀಟ್‌ಕಾಡು

### ಸ್ಮೈಲ್ ಪ್ಲೀಸ್

ಮೊಗದಲ್ಲಿ ಬೇಡ
ಬಿಗುತನ
ನಗು ನಗುತಿರುವುದು
ಜಾಣತನ
ಛಾಯಾಗ್ರಾಹಕನ
ಕೇಳು ಮಾತು
ಹೇಳುವನು
ಸ್ಮೈಲ್ ಪ್ಲೀಸ್

ಶ್ರೀ ಮಹೇಶ.ನಿಟಿಲಾಪುರ

## ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಎನ್.ಕೆ. ಜಗನ್ನಿವಾಸ ರಾಯರಿಗೆ ಸನ್ಮಾನ

■...1ನೇ ಪುಟದಿಂದ

ಹಿನ್ನೆಲೆಯಲ್ಲಿ ಸಂಘದ ಹುಟ್ಟು ಹಾಗೂ ಬೆಳವಣಿಗೆಗೆ ಕಾರಣೀಭೂತರಾದ ಅನೇಕ ಹಿರಿಯರನ್ನು ನೆನೆಪಿಸಿಕೊಂಡು ಸಂಸ್ಥಾಪಕರ ಸ್ಮರಣೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಬಳಿಕ ಶ್ರೀ ಎನ್.ಕೆ.ಜಗನ್ನಿವಾಸ ರಾಯರ ಪರಿಚಯ ಹಾಗೂ ಸಾಧನೆಗಳನ್ನು ಶ್ರೀ ಸಿ.ಎಸ್. ರಾವ್‌ರವರು ಸಭೆಗೆ ಮಾಡಿದರು. ನಂತರ ಶ್ರೀ ಎನ್.ಕೆ.ಜಗನ್ನಿವಾಸ ರಾಯರನ್ನು ಶಾಲು, ಹಾರ, ಸ್ಮರಣಿಕೆ ಹಾಗೂ ಸಮ್ಮಾನ ಪತ್ರಗಳೊಂದಿಗೆ ಪುರಸ್ಕರಿಸಿ ಗೌರವಿಸಲಾಯಿತು.

ಸನ್ಮಾನಕ್ಕೆ ಉತ್ತರಿಸಿದ ಜಗನ್ನಿವಾಸರಾಯರು ನಮ್ಮವರು ಬ್ರಾಹ್ಮಣ್ಯವನ್ನು ನಿರ್ಲಕ್ಷಿಸಬಾರದು, ಧಾರ್ಮಿಕ ಭಾವನೆ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ನಮ್ಮವರು ದೇವಕಾರ್ಯ ಮಾಡುವುದನ್ನು ಮುಂದುವರಿಸಬೇಕು. ಅವರು ವೇದಾಭ್ಯಾಸ, ಮಂತ್ರಪಠಣ ಹಾಗೂ ಸೂಕ್ತ ವಸ್ತ್ರಭೂಷಣಗಳನ್ನು ಧರಿಸಿ ದೇವಸ್ಥಾನಗಳಲ್ಲಿ ಕೆಲಸ ಮಾಡಿ ವೃತ್ತಿಯ ಗೌರವ ಹೆಚ್ಚಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು. ನಮ್ಮವರು ದೇವಸ್ಥಾನಗಳ ಆಡಳಿತದಲ್ಲಿ ಪ್ರವೇಶಿಸಲು ಇಚ್ಚಿಸಿದಲ್ಲಿ ಅದಕ್ಕೆ ತನ್ನ ಸಹಾಯವಿದೆ ಎಂದೂ ತಿಳಿಸಿದರು.

ಶ್ರೀ ಫಾಲಚಂದ್ರರಾಯರು ಅಭಿನಂದನಾ ಭಾಷಣ ಮಾಡಿದರು. ಉದಯಚಂದ್ರ ಪುರಸ್ಕಾರ ಹಾಗೂ ಶ್ರೀ ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ಪುರಸ್ಕಾರ ನಡೆಯಿತು. ಶ್ರೀ ದೇವಿಗೆ ಬಂಗಾರದ ಕಿವಿಯೋಲೆಗಳನ್ನು ಸಮರ್ಪಿಸಿದ ಶ್ರೀ ಕೆ. ಸುಧಾಕರ ರಾವ್, ಜ್ಞಾನ ಮಂದಿರದ ಮೆಟ್ಟಿಲುಗಳಿಗೆ ಸ್ವಯಂ ಸ್ಫೂರ್ತಿಯಿಂದ ಗ್ರಿಲ್‌ಗಳನ್ನು ಅಳವಡಿಸಿಕೊಟ್ಟ ಶ್ರೀ ಕೃಷ್ಣಮೂರ್ತಿ ರಾವ್, ಅಂದಿನ ಬಹುಮಾನವನ್ನು ಪ್ರಾಯೋಜಿಸಿದ ಶ್ರೀ ವೈ. ಮೋಹನ ರಾವ್ ಹಾಗೂ ಶ್ರೀಮತಿ ಸುನಂದಾ ಸಿ.ಎಸ್. ರಾವ್‌ರನ್ನು ಅಭಿನಂದಿಸಲಾಯಿತು. ವಿದ್ಯಾರ್ಥಿವೇತನ ವಿತರಣೆ ಹಾಗೂ ಬಹುಮಾನ ವಿತರಣೆಯನ್ನು ವೇದಿಕೆಯಲ್ಲಿದ್ದ ಗಣ್ಯರು ನಡೆಸಿಕೊಟ್ಟರು. ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರರಾವ್‌ರವರು ಇಂದಿನ ಕಾರ್ಯಕ್ರಮ ಯಶಸ್ವಿಗೊಳಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ತಿಳಿಸಿ, ಸಂಘದ ಬೆಳವಣಿಗೆಗೆ ಧನಾತ್ಮಕವಾಗಿ ದುಡಿಯುವುದಾಗಿ ತಿಳಿಸಿದರು. ಕಾರ್ಯದರ್ಶಿ ಕೊಕ್ರಾಡಿ ಸುರೇಶ್ ರಾಯರ ಧನ್ಯವಾದದೊಂದಿಗೆ ಸಭಾಕಾರ್ಯಕ್ರಮ ಮುಕ್ತಾಯವಾಯಿತು.

## ವಿಜಯದಶಮಿಯಂದು ಮಿಂಚಿದ ಶ್ರೀಶಾರದಾ ಯಕ್ಷಗಾನ ಕಲಾವಿದರು


■...1ನೇ ಪುಟದಿಂದ

ಸಂತೋಷ್ ರಾವ್ ಇವರು, ಕಾಶೀರಾಜ ಪ್ರತಾಪಸೇನನಾಗಿ, ಘನತೆವೆತ್ತ ತೀರ್ಥಕ್ಷೇತ್ರವೊಂದರ ಅರಸನಾಗಿ ಕಾಶೀವಿದ್ಯಾಪೀಠದ ಪ್ರಾಚೀನತೆಯನ್ನು ಎತ್ತಿಹಿಡಿದರು. ದೇವವ್ರತನೆಂಬ ನಾಮಧೇಯವಿದ್ದರೂ ತನ್ನ ಅಪ್ರತಿಮವಾದ ಮಾನಸಿಕ ದೃಢತೆಯಿಂದ ëಭೀಷ್ಮ1 ನೆನಿಸಿ ಕೊನೆತನಕವೂ ತನ್ನ ಅಮೋಘ ಪ್ರತಿಜ್ಞೆಯ ಬಗ್ಗೆ ಸ್ಥಿತಪ್ರಜ್ಞನಾಗಿ, ತನ್ನ ತಾಯ್ನಾಡಿಗಾಗಿಯೇ ದೀರ್ಘಕಾಲ ಬಾಳಿದ ëಭೀಷ್ಮಾಚಾರ್ಯ1ನಾಗಿ ಶ್ರೀ ವಿಶ್ವನಾಥ ಶ್ಯಾನುಭೋಗ್, ಇವರು ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಆರಂಭದಲ್ಲಿ ಕೋಡಂಗಿಯಾಗಿ ಪ್ರವೇಶಿಸಿ ಬಯಲಾಟವನ್ನು ಪ್ರಾರಂಭಿಸಿದ ಕು| ವಿಘ್ನೇಶ್, ಬಾಲಗೋಪಾಲರಾಗಿ ಚಿ| ಆದಿತ್ಯ ರಾವ್ ಮತ್ತು ಚಿ| ಸ್ಕಂದ ಶ್ಯಾನುಭೋಗ್ ಇವರು ಉತ್ತಮ ನಿರ್ವಹಣೆ ಮಾಡಿದರು. ವಿವಾಹಾಕಾಂಕ್ಷಿಗಳಾದ ದೃಢಸೇನನಾಗಿ ಶ್ರೀ ವ್ಯಾಸ ರಾವ್ ಕಲ್ಮಂಜೆ ಮತ್ತು ಸುಕೇತನಾಗಿ ಶ್ರೀ ಶ್ರೀಕಾಂತ ರಾವ್, ಚೊಕ್ಕಾಡಿ, ಇವರುಗಳು ಉತ್ತಮ ಅಭಿನಯವನ್ನೇ ನೀಡಿದರು. ಖಳನಾಯಕನಾದ ಸೌಭರಾಜ ಸಾಲ್ವನಾಗಿ ಶ್ರೀ ವಾಗೀಶ ರಾವ್, ನಿಟ್ಟೂರು ಮತ್ತು ಶ್ರೀ ವಾಗೀಶ ರಾವ್, ಕಲ್ಮಂಜೆ ಇವರುಗಳ ಪಾತ್ರ ನಿರ್ವಹಣೆ ಮನೋಜ್ಞವಾಗಿತ್ತು. ಪ್ರಥಮದಲ್ಲಿ ಅಂಬೆಯಾಗಿ ಕು| ವೃಂದಾ ಕೆ. ರಾವ್. ಅಂಬಿಕೆಯಾಗಿ ಶ್ರೀ ಕಾರ್ತಿಕ ರಾವ್ ಸಿ., ಮತ್ತು ಅಂಬಾಲಿಕೆಯಾಗಿ ಕು|ಅನುಶ್ರೀ ಇವರುಗಳು ಉತ್ತಮ ನಿರ್ವಹಣೆಯನ್ನೇ ಮಾಡಿದರು. ಇಡಿಯ ಆಖ್ಯಾನದಲ್ಲಿ ಏಕಮಾತ್ರ ಹಾಸ್ಯ ಪಾತ್ರವಾಗಿರುವ ವೃದ್ಧ ಬ್ರಾಹ್ಮಣನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಮೆನೇಜರ್ ಶ್ರೀ ಅಜಿತ್ ರಾವ್, ಇವರು ಯಶಸ್ವಿಯಾದರು, ಶಬರ ಏಕಲವ್ಯನಾಗಿ ಶ್ರೀ ಅರವಿಂದ ಕುಮಾರ್ ಇವರು ತನ್ನ ಪಡೆಯವರಾಗಿ ಭಾಗವಹಿಸಿದ್ದ ಕು| ಆದಿತ್ಯ, ಕು ಸ್ಕಂದ, ಶ್ರೀ ಶ್ರೀಕಾಂತ ಮತ್ತು ಶ್ರೀ ಶ್ರೀಕಾಂತ ರಾವ್ ಇವರುಗಳೊಂದಿಗೆ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿ ಭೀಷ್ಮನೊಂದಿಗೆ ಕಾದಾಡಿದರು.

ಭಗ್ನಪ್ರೇಮಿಯಾದ ಅಂಬೆಯ ಪಾತ್ರದಲ್ಲಿ ಮಿಂಚಿದ ಕು ಸುಮನಾ ರಾವ್ ಕಿನ್ನಿಮುಲ್ಕಿ, ಇವರು ತನ್ನ ನೃತ್ಯ ಅಭಿನಯ, ಆವೇಶಪೂರ್ಣವಾದ ಮಾತುಗಳಿಂದ ಸಭಿಕರ ಮನಗೆದ್ದರು. ಕ್ಷತ್ರಿಯ ವಿರೋಧ ಪರಶುರಾಮನ ಪಾತ್ರದಲ್ಲಿ ಶ್ರೀ ಕೃಷ್ಣಕುಮಾರ್, ಮಟ್ಟು, ಇವರು ಭೀಷ್ಮನಿಗೆ ಎದುರಾಳಿಯಾಗಿ ಪ್ರಬುದ್ಧ ಅಭಿನಯವನ್ನೇ ನೀಡಿದರು. ಎಲ್ಲಾ ಪಾತ್ರಧಾರಿಗಳನ್ನೂ ಈ ಆಖ್ಯಾನಕ್ಕೆ ಅನುಗೊಳಿಸಿದ ಯಕ್ಷಗುರು ಶ್ರೀ ಮಂಜುನಾಥ ಕುಲಾಲ್, ಇವರು ಅಭಿನಂದನಾರ್ಹರು. ಶ್ರೀ ಬ್ರಹ್ಮಲಿಂಗೇಶ್ವರ ಗಜಾನನ ಯಕ್ಷಗಾನ ಸಂಘ ಬ್ರಹ್ಮಾವರ ಇವರು ಸಮರ್ಥಕವಾಗಿ ವೇಷ ಭೂಷಣಗಳನ್ನೊದಗಿಸಿದ್ದು ಕಾರ್ಯಕ್ರಮಕ್ಕೆ ಕಳೆತಂದಿತು. ಒಟ್ಟಿನಲ್ಲಿ ಇಂದೊಂದು ಯಶಸ್ವೀ ಪ್ರಯೋಗವಾಗಿದ್ದು ಕಲಾವಿದರೆಲ್ಲರೂ ಅಭಿನಂದನಾರ್ಹರು

**- ಶ್ರೀ ಮ.ನಾ.ಹೆಬ್ಬಾರ್ ಎಂ.ಎ., ಬಿ.ಎಡ್**

**ಪುಸ್ತಕ ಪರಿಚಯ**




ನಾಡಿನ ಪ್ರಸಿದ್ಧ ವಿದ್ವಾಂಸರೂ,ಹೆಸರಾಂತ ಲೇಖಕರೂ, ಚಿಕ್ಕಮಗಳೂರು ಜಿಲ್ಲಾ ಏಳನೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆದ ಡಾ ಎಚ್.ವಿ. ನರಸಿಂಹಮೂರ್ತಿಯವರ ಶ್ರೇಷ್ಠ ಕೃತಿ ‘ಸುಪ್ರಭಾತ’. ಬಾಳಿಗೆ ಬೆಳಕು ನೀಡುವ ಐವತ್ತೈದು ಆಕಾಶವಾಣಿ ಚಿಂತನೆಗಳ ಸಂಕಲನ ಈ ಕೃತಿ.

ಈ ಪುಸ್ತಕದ ಮುನ್ನುಡಿಯಲ್ಲಿ ಹೊರನಾಡು ಶ್ರೀಅನ್ನಪೂರ್ಣೇಶ್ವರೀ ದೇವಸ್ಥಾನದ ಧರ್ಮದರ್ಶಿಯಾದ ಡಾ.ಭೀಮೇಶ್ವರ ಜೋಷಿಯವರು ಹೇಳುವಂತೆ ‘ಇಲ್ಲಿ ಸಚ್ಚಿಂತನೆಗಳ ಬಲು ದೊಡ್ಡ ಸಂಗ್ರಹವಿದೆ. ಬಲು ನಯವಾಗಿ, ಓದಲು ಹಿತವಾಗುವ ರೀತಿಯಲ್ಲಿ ಎಲ್ಲಾ ಚಿಂತನೆಗಳನ್ನು ಡಾ ನರಸಿಂಹಮೂರ್ತಿಯವರು ‘ಸುಪ್ರಭಾತ’ ಎಂಬ ಹೆಸರಿನಡಿಯಲ್ಲಿ ಕಲೆ ಹಾಕಿದ್ದಾರೆ. ಅವರ ಶ್ರಮ ಬಹಳ ದೊಡ್ಡದು. ಸೂಕ್ತ ಸಂದರ್ಭಗಳಲ್ಲಿ ಕನ್ನಡ ಕವಿಗಳ, ವೇದ-ಉಪನಿಷತ್ತುಗಳ, ಪುರಾಣಗಳ, ಸನಾತನ ಭಾರತೀಯ ಋಷಿ ಪರಂಪರೆಯ ನುಡಿಮುತ್ತುಗಳನ್ನು ಬಳಸಿ ಕೊಂಡಿರುವ ನಿರೂಪಣೆ ಬಹಳ ಸೊಗಸಾಗಿದೆ. ಎಲ್ಲ ಚಿಂತನೆಗಳನ್ನು ಮತ್ತೆ ಮತ್ತೆ ಓದುವಂತೆ ಮಾಡುತ್ತದೆ.

ಇಲ್ಲಿನ ಆಕರ್ಷಕವಾದ ಶೀರ್ಷಿಕೆಗಳೇ ಲೇಖನಗಳ ಒಳಹೊರಣವನ್ನು ಅನಾವರಣ ಗೊಳಿಸುತ್ತವೆ. ‘ಪ್ರಭಾತೇ ಕರದರ್ಶನಮ್’, ‘ತಮಸೋ ಮಾ ಜ್ಯೋತಿರ್ಗಮಯ’ ಮೊದಲಾದ ಸಂಸ್ಕೃತ ಶೀರ್ಷಿಕೆಗಳು, ‘ಬಾಳಿನ ಗುರಿ, ಸುಖದ ರಹಸ್ಯ’, ‘ಮನೆ ಬಿಡದ ಬಾಡಿಗೆದಾರ’ ಮುಂತಾದ ಕನ್ನಡ ಶೀರ್ಷಿಕೆಗಳು ಓದುಗರನ್ನು ಆಕರ್ಷಿಸುತ್ತವೆ. ಹೇಳಬೇಕಾದುದನ್ನು ಮಿತವಾಗಿ, ಸಾರವತ್ತಾಗಿ ಹೇಳುವ ಕಲೆ ಡಾ। ಮೂರ್ತಿಯವರಿಗೆ ಒಲಿದಿದೆ.

ಇದು ದಾವಂತದ ಯುಗ. ದೊಡ್ಡ-ದೊಡ್ಡ ಪುಸ್ತಕಗಳನ್ನು, ಉದ್ದುದ್ದದ ಬರಹಗಳನ್ನು ಓದುವ ವ್ಯವಧಾನ ಇಂದು ಯಾರಿಗೂ ಇಲ್ಲ. ಓದಿದ ಕೂಡಲೆ ಮನಸ್ಸನ್ನು ತಟ್ಟುವಂತಹ ಪುಟ್ಟ-ಪುಟ್ಟ ಬರಹಗಳನ್ನು ಓದುಗರು ಬಹುವಾಗಿ ಮೆಚ್ಚಿಕೊಳ್ಳುತ್ತಾರೆ. ಅವುಗಳಲ್ಲಿ ಸಂದರ್ಭೋಚಿತವಾದ ದೃಷ್ಟಾಂತ ಕಥೆಗಳು, ಜೀವನಾನುಭವಗಳು ಇದ್ದರೆ ಅವರಿಗೆ ಅದು ಅಸ್ವಾದ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಡಾ। ನರಸಿಂಹಮೂರ್ತಿಯವರ ಈ ಗ್ರಂಥ ಎಲ್ಲರಿಗೂ ಪ್ರಿಯವಾಗುತ್ತದೆ. ಶಿಕ್ಷಕರಿಗೆ,ವಿದ್ಯಾರ್ಥಿಗಳಿಗೆ, ಭಾಷಣಕಾರರಿಗೆ, ಯಕ್ಷಗಾನ-ಹರಿಕಥೆಗಳ ಕಲಾವಿದರಿಗೆ, ಪ್ರವಚನಕಾರರಿಗೆ-ಹೀಗೆ ಎಲ್ಲರಿಗೂ ಬೇಕಾದ ಅನೇಕ ಸಂಗತಿಗಳು ಇಲ್ಲಿ ಸುಂದರವಾಗಿ ನಿರೂಪಿತವಾಗಿದೆ. ಪುರುಸೊತ್ತು ಸಿಕ್ಕಿದಾಗ ಒಮ್ಮೆ ಕಣ್ಣಾಡಿಸಿದರೂ ಸಾಕು, ನಾಲ್ಕು ನಿಮಿಷಗಳಲ್ಲಿ ಓದಿ ಮುಗಿಸಬಹುದಾದ ಇಲ್ಲಿನ ಪುಟ್ಟ-ಪುಟ್ಟ ಬರಹಗಳು ಮನಸ್ಸಿಗೆ ಅಹ್ಲಾದ ನೀಡುತ್ತವೆ. ಓದುಗರಿಗೆ ಅರಿವಿಲ್ಲದಂತೆ ಅವರ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ.

ಆಕರ್ಷಕ ಮುಖಪುಟ, ಸುಂದರವಾದ ಮತ್ತು ತಪ್ಪಿಲ್ಲದ ಮುದ್ರಣ ಹಾಗೂ ಅರ್ಥಪೂರ್ಣ ಶೀರ್ಷಿಕೆಯಿಂದ ಕೂಡಿರುವ ಈ ಗ್ರಂಥ ಎಲ್ಲರ ಮನ-ಮನೆಗಳನ್ನು ತಲುಪಬೇಕು; ಮನಸ್ಸಿನ ಜಾಡ್ಯವನ್ನು ತೊಲಗಿಸಬೇಕು. ಹಾಗಾದಾಗ ಮಾತ್ರ ಈ ಗ್ರಂಥದ ಹಿಂದೆ ಇರುವ ಡಾ। ಮೂರ್ತಿಯವರ ಆಶಯ ಸಾರ್ಥಕವಾದೀತು.

**- ಡಾ ಪಿ.ವಿ ಸತ್ಯನಾರಾಯಣ**

**ವೈಚಾರಿಕ ಲೇಖನ**

## ದೀಪ

ಕತ್ತಲನ್ನು ನಿವಾರಿಸಲು ದೀಪ ಅವಶ್ಯವಾಗಿದೆ. ಬೇರೆ ಬೇರೆ ರೀತಿಯಿಂದ ಅನೇಕ ಕಡೆಗಳಲ್ಲಿ ದೀಪವನ್ನು ಬಳಸುತ್ತಾರೆ. ದೀಪವು ಸೌರಶಕ್ತಿಯ ಪ್ರತಿರೂಪ. ಸೌರಶಕ್ತಿಯ ಮತ್ತೊಂದು ರೂಪವೇ ಬೆಂಕಿ. ಬೆಂಕಿಯ ಉಪಕಾರ ರೂಪವೇ ದೀಪ.ಪೂಜೆಯ ಆದಿಯಲ್ಲಿ ದೀಪವನ್ನು ಹಚ್ಚುತ್ತಾರೆ. ದೀಪವನ್ನು ಹಚ್ಚುವುದಕ್ಕೆ ಅನೇಕ ವಿಧಿಗಳಿವೆ. ಮಂಡಲವೋ ಅಥವಾ ಅಕ್ಷತೆಯನ್ನೂ ಇಟ್ಟು ಅದರ ಮೇಲೆ ದೀಪವನ್ನು ಇಟ್ಟು ಎಳ್ಳೆಣ್ಣೆ ಅಥವಾ ತುಪ್ಪವನ್ನೊ ಹಾಕಿ ದೀಪವನ್ನು ಹಚ್ಚುತ್ತಾರೆ. ಅನಂತರ ಅರಶಿನ ಕುಂಕುಮವನ್ನು ಅದಕ್ಕೆ ಹಚ್ಚಿ ಪುಷ್ಪಾಕ್ಷತೆಯನ್ನು ಅರ್ಪಿಸಿ ಈ ರೀತಿ ಪ್ರಾರ್ಥಿಸುತ್ತಾರೆ.

ಭೋ ದೀಪ ದೇವೀ ರೂಪಸ್ತ್ವಮ್ ಕರ್ಮ ಸಾಕ್ಷೀ ಹ್ಯವಿಘ್ನಕೃತ್। ಯಾವತ್‌ಕರ್ಮ ಸಮಾಪ್ತಿಃ ಸ್ಯಾತ್ ತಾವತ್ವಮ್ ಸುಸ್ಥಿರೋಭವ ॥

ಅಂದರೆ- ಹೇ ದೀಪವೇ ನೀನು ದೇವಿ ರೂಪವಾಗಿದ್ದಿ ಈ ಕರ್ಮ ಅಂತ್ಯವಾಗುವವರೆಗೆ ಸ್ಥಿರವಾಗಿರು. ಇಲ್ಲಿ ದೀಪವನ್ನು ದೇವಿಗೆ ಹೋಲಿಸಿದ್ದಾರೆ. ಜಗತ್ತಿನಲ್ಲಿರುವ ಜೀವ ಮತ್ತು ನಿರ್ಜೀವ ವಸ್ತುಗಳಿಗೂ ದೈವತ್ವವನ್ನು ನಮ್ಮ ಹಿರಿಯರು ಆರೋಪಿಸುತ್ತಾರೆ. ನಮ್ಮ ಅಹಂಕಾರವನ್ನು ಅಳಿಸಿ ಪ್ರಕೃತಿಯನ್ನು ಸಂರಕ್ಷಿಸುವ ಉದ್ದೇಶ ಇದರಲ್ಲಿ ಅಡಗಿದೆ. ದೀಪವನ್ನು ದೊಡ್ಡದು ಮಾಡು ಎಂದು ಹೇಳುವ ವಾಡಿಕೆ ಕೆಲವು ಕಡೆಗಳಲ್ಲಿದೆ. ಹಿಂದಿಯಲ್ಲಿ ದೀಪಾ ಬಢಾನಾ ಅಂದರೆ ವ್ಯಾವಹಾರಿಕವಾಗಿ ಆರಿಸುವ ಕ್ರಿಯೆಗೆ ಹೀಗೆ ಹೇಳುತ್ತಾರೆ. ವಾಸತಿವವಾಗಿ ಬಢಾನಾ ಅಂದರೆ ದೊಡ್ಡದು ಎಂದರ್ಥ. ಇಲ್ಲಿ ಪೂಜ್ಯ ಭಾವನೆ ಕಾಣಿಸುತ್ತದೆ. ದೀಪದ ಬತ್ತಿ ದೂಡಲು ಕೈ ಬೆರಳು ಹಾಕಬಾರದು ಎಂಬಲ್ಲಿ ಶುಚಿತ್ವ ಮತ್ತು ಮಿತವ್ಯಯದ ಬುದ್ಧಿ ಕೆಲಸ ಮಾಡುತ್ತದೆ.

ಹೀಗೆ ದೀಪದ ಬಗ್ಗೆ ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ಶ್ರದ್ಧೆ-ಭಕ್ತಿ-ಭಾವನೆಗಳಿವೆ. ದೀಪೋತ್ಸವ, ದೀಪಾರಾಧನೆ, ದೀಪ ನಮಸ್ಕಾರ, ದೀಪ-ದಾನ ಕಾರ್ತೀಕ ಮಾಸದಲ್ಲಂತೂ ವಿಶೇಷವಾಗಿ ನಡೆಯುತ್ತದೆ. ಕತ್ತಲನ್ನು ನಿವಾರಿಸಲು ದೀಪ ಬೇಕೇ ಬೇಕು. ಜೀವನದ ಕತ್ತಲನ್ನು ನಿವಾರಿಸಲು ದೇವರೆಂಬ ದೀಪ ಬೇಕೇ ಬೇಕು. ಒಟ್ಟಿನಲ್ಲಿ ದೀಪವೇ ದಾರಿದೀಪ.

**-ರಾಮಮೂರ್ತಿ ಶಾಸ್ತ್ರಿ, ಬೆಂಗಳೂರು**


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
“ಶ್ರೀರಂಗ”, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ಪ್ರವಾಸ ಲೇಖನ**

# ಮೋಡಿ ಮಾಡಿದ ಮೋದಿರಾಜ್ಯ...

ಇದು ಅರಬ್ಬೀ ಸಮುದ್ರ, ಸೌರಾಷ್ಟ್ರ ಕರಾವಳಿಯ ಗುಜರಾತ್ ರಾಜ್ಯ ಎಂದು ಬೇರೆ ಹೇಳಬೇಕಾದ ಅವಶ್ಯವಿಲ್ಲ. ಅಲ್ಲಿ ಮುಖ್ಯಮಂತ್ರಿಯಾಗಿದ್ದ (ಈಗ ಪ್ರಧಾನಿ) ಮೋದಿಯವರ ರಾಜ್ಯದ ಅಭಿವೃದ್ಧಿ ನೋಡುವ ಕಾತರದಿಂದ ಈ ಪ್ರವಾಸ ಆಯೋಜಿಸಿದ್ದೆವು. ತಾ.03-10-2015 ರಂದು ಹೊರಟ 9 ದಿನಗಳ ರೈಲು-ಬಸ್ಸುಗಳ ಮುಖಾಂತರ ಸುಮಾರು 60 ಪ್ರವಾಸಿಗರಿದ್ದ (ನಾವು 10 ಸಂಬಂಧಿಕರು ಸೇರಿ) ನೆನಪಿಸಿಕೊಳ್ಳಬಹುದಾದ ಈ ಪ್ರವಾಸ ಹೆಚ್ಚಿನ ಪ್ರಯಾಸ ಇಲ್ಲದೆ ಸುಖಾಂತ್ಯವಾಯಿತು. ಸುಮಾರು 4200 ಕಿ.ಮೀ ಪ್ರಯಾಣ (ಹೋಗಿ-ಬರಲು) ಗುಜರಾತಿನ ಬಿಸಿಲಿನ ಝಳ ಹೊರತು ಪಡಿಸಿ, ವಾತಾನುಕೂಲ ರೈಲು ಬೋಗಿಗಳ ವ್ಯವಸ್ಥೆಯಿಂದ ದೇಹ-ಮನಸ್ಸು ತಂಪಾಯಿತು. ಪ್ರಧಾನಿ ಮೋದಿಯವರ ಕಾರ್ಯಕ್ಷೇತ್ರವಾದ ಗುಜರಾತ್ ಸಂದರ್ಶನ ಕೆಲವಾರು ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲವಾಯಿತು.

ಪೌರಾಣಿಕ/ಚಾರಿತ್ರಿಕ ಕ್ಷೇತ್ರಗಳ ಬಗ್ಗೆ ಕಿರುಪರಿಚಯ ಇಲ್ಲಿದೆ. ಹೆಚ್ಚಿನ ಪ್ರವಾಸಿ ಪ್ರಿಯರು ಈ ಭಾಗವನ್ನು ನೋಡಿರಬಹುದು ಆದರೂ ಕೆಲವು ವಿಷಯ ಹೇಳಲೇಬೇಕಾದ ಅನಿವಾರ್ಯತೆ. ನೋಡಿದವರಿಗೆ ಮರುಕಳಿಸುವ ನೆನಪು- ನೋಡದವರಿಗೆ ಕಾತುರ. ದ್ವಾರಕಾದಲ್ಲಿ ಮುಖ್ಯವಾಗಿ, 1. ದ್ವಾರಕಾಧೀಶನ (ಶ್ರೀ ಕೃಷ್ಣ) ಮಂದಿರ 2. ಸಿದ್ದೇಶ್ವರ ಮಂದಿರ 3. ಗಾಯತ್ರಿ ಮಂದಿರ 4. ಗೀತಾ ಮಂದಿರ 5. ಬಾಣೇಶ್ವರ ಮಂದಿರ. 6.ಇಲ್ಲಿ ಹರಿಯುವ ಪವಿತ್ರ ಗೋಮತಿ ನದಿ. ಅವಳು ಪಶ್ಚಿಮ ಸಮುದ್ರದಲ್ಲಿ ಸಂಗಮಿಸುವ ಸ್ಥಳ ಹಾಗೂ ಸೂರ್ಯಾಸ್ತಮಾನವಾಗುವ ಕೇಂದ್ರ 7. ಚತುರಾಮ್ನಾಯ ಪೀಠಗಳಲ್ಲೊಂದಾದ ಪಶ್ಚಿಮಾಮ್ನಾಯ ಶಾರದಾಮಠ. ಭಾರತದ ಮುಖ್ಯಯಾತ್ರಾಧಾಮಗಳಲ್ಲಿ ಒಂದಾದ ದ್ವಾರಕಾನಾಥನ ದರ್ಶನದಿಂದ ಮಾಡಿದ ಪಾಪ ಪರಿಹಾರವಾಗುವುದೆಂದು ಹಿಂದುಗಳ ನಂಬಿಕೆ. ಇಲ್ಲಿಯ ಶ್ರೀಕೃಷ್ಣ ವಿಗ್ರಹ ತುಂಬ ಸುಂದರ ಹಾಗೂ ಹೋಳಿ, ದೀಪಾವಳಿ ಮತ್ತು ಜನ್ಮಾಷ್ಟಮಿಯಲ್ಲಿ ಅವನ ಶೃಂಗಾರ ವರ್ಣನಾತೀತ. ಇಲ್ಲಿಯ ವಿಶೇಷತೆಯೆಂದರೆ ದೇವಳದ ಮುಗಳಿ ಮೇಲೆ ಹಾರಾಡುವ ಭಗವಾನ್ ಧ್ವಜ. ಇದನ್ನು ಬೆಳಗ್ಗೆಯಿಂದ ಮಧ್ಯಾಹ್ನದೊಳಗೆ 3ಸಲ ಅನಂತರ ಸಂಜೆ ಒಳಗೆ 2ಸಲ ಆರೋಹಣ-ಅವರೋಹಣ ಮಾಡುತ್ತಾರೆ. ಇದನ್ನು ಸೇವಾರೂಪದಲ್ಲಿ (ಪ್ರತಿ ಸೇವಾರ್ಥಿ ರೂ.15,000/-ದಂತೆ) 5 ಸೇವಾರ್ಥಿಗಳಿಗೆ ಮಾತ್ರ ಈ ಹರಕೆ ಲಭ್ಯ. ಸದ್ಯ 4 ವರ್ಷಗಳವರೆಗೆ ಈ ಹರಕೆ ನಿಗದಿಯಾಗಿದೆ. ಅವರೋಹಣದ ನಂತರ ಆ ಧ್ವಜವನ್ನು ಸೇವಾರ್ಥಿಗೆ ಪ್ರಸಾದ ರೂಪದಲ್ಲಿ ನೀಡುತ್ತಾರೆ. ಹರಕೆ ಸಲ್ಲಿಸುವ ಮೊದಲು, ಸೇವಾರ್ಥಿ ಬ್ಯಾಂಡ್-ಬಂಜತ್ರಿಗಳೊಂದಿಗೆ ಮೆರವಣಿಗೆಯಲ್ಲಿ ಬರುತ್ತಾರೆ. ಗೋಮತಿ ನದಿ ಸಂಗಮವಾಗುವಲ್ಲಿ ಸಮುದ್ರ ನಾರಾಯಣ ಮಂದಿರವಿದೆ. ಪಕ್ಕದಲ್ಲೇ ಸೂರ್ಯಾಸ್ತಮಾನ ನೋಡುವುದೇ ಒಂದು ಸಂಭ್ರಮ. ಸಮುದ್ರ ಕೊರೆತ ತಡೆಗಟ್ಟಲು ಸರಕಾರ ವಿಶಿಷ್ಟ ರೀತಿಯಲ್ಲಿ ತಯಾರಿಸಿದ ಸಿಮೆಂಟ್ ಚಪ್ಪಡಿಗಳನ್ನು ಜೋಡಿಸಿದೆ.

ಶುದ್ಧ ಪರಿಸರ ಹೊಂದಿರುವ ಸಮುದ್ರತೀರ, ದೇವಳದ ಪ್ರಾಂಗಣ ಹಾಗೂ ಸುತ್ತಮುತ್ತಲ ಬೀದಿಗಳು, ಗೋಮತಿ ನದಿತೀರ ಎಲ್ಲವೂ ಸ್ವಚ್ಛವಾಗಿದೆ. ತಾ.04ರಂದು ನಾವು ದ್ವಾರಕಾ ತಲುಪಿದ ದಿನವೇ “ಹೋಟೆಲ್ ನಂದನಂದನ”ದಲ್ಲಿ ಉಳಕೊಂಡು, ಶುಚಿರ್ಭೂತರಾಗಿ ರಾತ್ರಿ ‘ದ್ವಾರಕಾಧೀಶನ’ ದರ್ಶನ ಪಡೆದು ಪುನೀತರಾದೆವು. ಮಾರನೇ ದಿನ ಉಷಃಕಾಲದಲ್ಲಿ ಗೋಮತೀ ನದಿ ಸಂಗಮದಲ್ಲಿ ಸಮುದ್ರ ಸ್ನಾನಮಾಡಿ ಇತರ ಗುಡಿಗೋಪುರಗಳು, ಶಂಕರಪುರ, ಗೀತಾಮಂದಿರ ಇತ್ಯಾದಿ ನೋಡಿದೆವು. ಶ್ರಾದ್ಧಾದಿ ಅಪರಕ್ರಿಯೆಗಳನ್ನು ನಡೆಸುವರೆ ವ್ಯವಸ್ಥೆ ಇದೆ. (ನದಿ ತೀರದಲ್ಲಿ). ದ್ವಾರಕಾದ ಸಮೀಪ ನೋಡಬೇಕಾದ ಇತರ ಸ್ಥಳಗಳು: 1. ನಾಗೇಶ್ವರ ಮಹಾದೇವ 2.ಗೋಪಿ ಸರೋವರ. 3. ಬೇಟ್ ದ್ವಾರಕಾ 4. ರುಕ್ಮಿಣೀದೇವಿ ಮಂದಿರ.

ತಾ.05ರಂದು ದ್ವಾರಕಾದಿಂದ ಬೇಟ್ ದ್ವಾರಕಾಕ್ಕೆ, ನಮ್ಮ ಪ್ರಯಾಣ. ದೂರ್ವಾಸಮುನಿಯ ಶಾಪದಿಂದ ರುಕ್ಮಿಣಿಗೆ 12 ವರ್ಷ ಕೃಷ್ಣನ ಸಾಮೀಪ್ಯದಿಂದ ದೂರ ಉಳಿಯಬೇಕಾಯ್ತು. ಸುಮಾರು 3-4 ಕಿ.ಮೀ ಅಂತರದಲ್ಲಿ ಬೇಟ್ ದ್ವಾರಕಾ ದಾರಿಯಲ್ಲಿ ರುಕ್ಮಿಣಿ ದೇವಿಗೆ ಸುಂದರ ಅರಮನೆ ತಯಾರಾಗಿ ಅವಳು ಅದರಲ್ಲಿ ವಾಸಮಾಡಬೇಕಾಯ್ತು. ದೇವಿಗೆ ನಮ್ಮ ನಮನ ಸಲ್ಲಿಸಿ ಮುಂದುವರಿದೆವು. ಆ ಜಾಗದಲ್ಲಿ ಭಿಕ್ಷುಕರ ಒಗ್ಗಟ್ಟು ನಮ್ಮ ಮನ ಸೆಳೆಯಿತು. ನೂರಾರು ಭಿಕ್ಷುಕರು ಸ್ವಲ್ಪ ತಗ್ಗು ಪ್ರದೇಶದಲ್ಲಿ ಗುಂಪಾಗಿ ಕೂತು, ಅವರ ಪರವಾಗಿ ಮುಖಂಡನೊಬ್ಬ ಭಿಕ್ಷೆ ಬೇಡುತ್ತಾ ಸಿಕ್ಕಿದ ಭಿಕ್ಷೆಯನ್ನು ಒಂದು ದೊಡ್ಡ ಹುಂಡಿಯೊಳಗೆ ಎಲ್ಲರ ಸಮಕ್ಷಮ ಹಾಕುತ್ತಾನೆ. ಕೂಡಲೇ ಎಲ್ಲಾ ಭಿಕ್ಷುಕರು ದಾನಿಗಳಿಗೆ ಆಶೀರ್ವದಿಸುವ ಕ್ರಮ ಕಣ್ತುಂಬಿ ಬಂತು. ಸಂಜೆಗೆ ಅದನ್ನು ಸಮನಾಗಿ ಹಂಚಿಕೊಳ್ಳುತ್ತಾರಂತೆ ಭಿಕ್ಷಾಟನೆ ನಿರ್ಮೂಲವಾಗಬೇಕಾದದ್ದು ಸಹಜವೇ. ಆದರೆ ಈ ರೀತಿ ಭಿಕ್ಷೆ ಬೇಡುವ ಕ್ರಮ, ಯಾತ್ರಾರ್ಥಿಗಳಿಗಾಗುವ ಹಿಂಸೆ/ಕಿರಿಕಿರಿಯನ್ನು ತಪ್ಪಿಸುತ್ತದೆ.

ದಾರಿಯಲ್ಲಿ ಮಿಥಾಪುರ ಟಾಟಾ ಉಪ್ಪು ತಯಾರಿಕಾ ಘಟಕವನ್ನು ಮಾರ್ಗದಲ್ಲಿ ಸಾಗುತ್ತಾ ನೋಡಿದೆವು. ಇದೊಂದು ಬಹಳ ದೊಡ್ಡ ಕಾರ್ಖಾನೆ. ಮುಂದಕ್ಕೆ ಈಕಾ ಬಂದರಿಗೆ ಹೋಗುವ ದಾರಿ. ನಾವು ಪ್ರಯಾಣಿಸಿದ ರೈಲು ಕೇರಳದ ಎರ್ನಾಕುಲಂನಿಂದ ಈಕಾಕ್ಕೆ ಹೋಗುತ್ತದೆ. ಈಕಾದಿಂದ ಸಮುದ್ರದಲ್ಲಿ 50 ನಾಟಿಕಲ್ ಮೈಲ್‌ನಲ್ಲಿ ಪಾಕಿಸ್ಥಾನದ ಗಡಿರೇಖೆ ಬರುತ್ತದೆ. ಟಾಟಾ ಉಪ್ಪು ಕಾರ್ಖಾನೆಯಿಂದ ಬೇಟ್‌ದ್ವಾರಕೆ ಬಹಳ ಸಮೀಪ. ಅದೊಂದು ಸಣ್ಣ ದ್ವೀಪ. ಯಾಂತ್ರೀಕೃತ ದೋಣಿಯಲ್ಲಿ ಪ್ರಯಾಣಿಸಿ, ಶ್ರೀ ಕೃಷ್ಣನ ಅರಮನೆ ಇದ್ದ ಸ್ಥಳ ತಲುಪಿದೆವು. ಶ್ರೀ ಕೃಷ್ಣ ರಾಜ್ಯಭಾರ ಮಾಡುತ್ತಾ, ದಾನಧರ್ಮ ಮಾಡುತ್ತಾ ವಿಶ್ರಾಂತಿ ಪಡೆದ ಸ್ಥಳ. ಇದೇ ಸ್ಥಳದಲ್ಲಿ ತನ್ನ ಬಾಲ್ಯ ಸ್ನೇಹಿತ ಕುಚೇಲ (ಸುಧಾಮ) ನನ್ನು ಭೇಟಿಯಾಗಿ ಅವನ ಬಡತನೀಗಿಸಿ, ಉದ್ಧರಿಸಿದ ಸ್ಥಳ. ಈ ಸ್ಥಳದಲ್ಲಿ ಮಹಾವಿಷ್ಣು ಮತ್ಸ್ಯಾವತಾರದಲ್ಲಿ ಶಂಖಾಸುರನನ್ನು ವಧೆ ಮಾಡಿದ ಕಥೆ ಪುರಾಣದಲ್ಲಿದೆ. ದ್ವಾರಕನಗರಿಗೆ “ಗೋಮತಿ ದ್ವಾರಕಾ” ಎಂದು ಕರೆಯುತ್ತಾರೆ. ಇಲ್ಲಿಂದ 20 ಕಿ.ಮೀ ದೂರದಲ್ಲಿ ಬೇಟ್ ದ್ವಾರಕಾವಿದೆ, ಮೀನುಗಾರಿಕೆ ಇಲ್ಲಿಯ ಜನರಿಗೆ ಆಧಾರ. ಈ ಬೇಟ್ ದ್ವಾರಕಾದಲ್ಲಿ, ಸುಮಾರು 90% ಮುಸ್ಲಿಮರೇ ಇದ್ದು ವ್ಯಾಪಾರ–ವಹಿವಾಟು ನಡೆಸುತ್ತಾರೆ. ಚಿಪ್ಪು/ಹರಳು/ಸಣ್ಣಪುಟ್ಟ ಅಂಗಡಿಗಳು/ಮೀನು ವ್ಯಾಪಾರ ಇತರ ಅವರ ಕಸುಬು. ಇಕ್ಕಟ್ಟಾದ ಗಲ್ಲಿಗಳಲ್ಲಿ ನಡೆದಾಡಬೇಕು, ಸ್ವಚ್ಛತೆ ಕಡಿಮೆ. ಇನ್ನೊಂದು ‘ಸ್ವರ್ಣದ್ವಾರಕೆ ಸಮುದ್ರದಲ್ಲಿ ಮುಳುಗಿದೆ. ಯಾದವೀ ಕಲಹದಿಂದಾಗಿ ಬೇಟ್ ದ್ವಾರಕಾದ ಸಮೀಪವೇ ದಾರುಕಾವನದ ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದಾದ, ನಾಗೇಶ್ವರ ಲಿಂಗದ ದರ್ಶನ ಭಾಗ್ಯವೂ ನಮ್ಮದಾಯಿತು. ಬೇಟ್ ದ್ವಾರಕಾದಿಂದ ಹಿಂತಿರುಗಿ ದ್ವಾರಕಾದಲ್ಲಿ ವಿಶ್ರಾಂತಿ ಪಡೆದು ಮಾರನೇ ದಿನ ಅಂದರೆ 06–10–2015ರಂದು ಪೋರ್‌ಬಂದರು ಮತ್ತು ಸೋಮನಾಥಪುರಕ್ಕೆ ಪ್ರಯಾಣಿಸಿದೆವು. ದಾರಿಯಲ್ಲಿ ಗೋಪಿತಲಾಬ್ (ಗೋಪಿಕಾ ಸ್ತ್ರೀಯರಿಗೆ ನೀರಿನಲ್ಲಿ ವಿಹರಿಸಲು ನಿರ್ಮಿಸಿದ ಕೆರೆ. ಈ ಕೆರೆಯ ನೀರನ್ನು ಉಪಯೋಗಿಸಿ ಅಲ್ಲಿಯ ಮಣ್ಣಿನಿಂದ ಗೋಪಿಚಂದನ ತಯಾರಿಸಿ ಮಾರಾಟ ಮಾಡುತ್ತಾರೆ. ಮುಂದೆ ಮೂಲದ್ವಾರಕಾ ಎಂಬ ಗ್ರಾಮಕ್ಕೆ ತಲುಪಿ ಸಣ್ಣ ಗುಡಿಗಳು ಇರುವ ಮೂಲದ್ವಾರಕಾಧೀಶ ಶ್ರೀ ನೀಲಕಂಠ ಮಹದೇವ, ಸಿದ್ದೇಶ್ವರ ಮಹದೇವ, ಹಾಗೂ 13ನೇ ಶತಮಾನದಲ್ಲಿ ನಿರ್ಮಿಸಿದ ಮೆಟ್ಟಲು ಬಾವಿಗೆ (Step well) ಇಳಿಯುತ್ತಾ ಸೂರ್ಯ, ವಿಷ್ಣು ಮತ್ತು ಬ್ರಹ್ಮನ ವಿಗ್ರಹಗಳು ಮತ್ತೂ ಕೆಳಗೆ ಇಂದು ಸಣ್ಣ ಕೆರೆ ಇದೆ. ಈ ಭಾಗದಲ್ಲಿ ನೀರಿಗೆ ಬಹಳ ತತ್ವಾರ, ಎಲ್ಲೆಲ್ಲಿಯೂ ಉಪ್ಪುನೀರು, ಜನಜೀವನ ಬಹಳ ಕಷ್ಟ. ಸ್ವಚ್ಛತೆ ಕಡಿಮೆ. ರಾ.ಹೆ.8Eಯಲ್ಲಿ ಸಾಗುತ್ತಾ ‘ಸುಧಾಮ ಪುರಿ’ (ಪೋರ್ ಬಂದರು) ತಲುಪಿದೆವು. ಬಾಪೂಜಿಯವರು (ಮಹಾತ್ಮಾಗಾಂಧಿ) ಜನ್ಮ ತಳೆದ ಮನೆ. ಗಾಂಧೀಜಿಯವರ ಕೋಣೆ–ಪಕ್ಕದಲ್ಲಿ ‘ಕಸ್ತೂರ್ ಬಾ’ರವರ ಮನೆ. ಸತ್ಯ–ಅಹಿಂಸೆ ಎಂಬ ಮಂತ್ರದೊಂದಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಅಮರರಾದ ‘ರಾಷ್ಟ್ರ ಪಿತಾಮಹ’ ಪ್ರಭಾತ ಕ್ಷೇತ್ರವೆಂದು ಕರೆಯಲ್ಪಡುವ ಈ ಭಾಗದಲ್ಲಿ ಬಾಲಕಾ ತೀರ್ಥಮಂದಿರ, ಶ್ರೀ ಕೃಷ್ಣ ಅಂತ್ಯವಾದ ಜಾಗ (ಮರದಲ್ಲಿ ಕೂತ ಕೃಷ್ಣನಗೆ ಬೇಡನೊಬ್ಬ ಪ್ರಾಣಿಯೆಂದು ಭಾವಿಸಿ ಬಾಣಬಿಟ್ಟ ಕಥೆ ನೀವು ಕೇಳಿರಬಹುದು) (5 ಸಾವಿರ ವರ್ಷ ಹಳೆಯದಾದ ಆ ಮರದ ಕುರುಹು ಈಗಾಲೂ ಇದೆ.) ಪುಗಟೇಶ್ವರ ಮಹಾದೇವ ಮಂದಿರ, ಗೋಲೋಕಧಾಮ ತೀರ್ಥ, ಗೀತಾಮಂದಿರ, ಬಲರಾಮ ತನ್ನ ಅಂತ್ಯಮುಗಿಸಿ ಸರ್ಪರೂಪದಲ್ಲಿ ಹೊಕ್ಕ ಗುಹೆ, ಲಕ್ಷ್ಮೀನಾರಾಯಣ ಮಂದಿರ ಇತ್ಯಾದಿ ನೋಡಿದೆವು.ಇಲ್ಲಿ ತ್ರಿವೇಣೀಸಂಗಮವಿದೆ. ಅಂದರೆ, ಕಪಿಲಾ ನದಿ, ಹಿರಾನ ನದಿ ಹಾಗೂ ಗುಪ್ತ ಗಾಮಿನಿಯಾಗಿ ಸರಸ್ವತಿ ನದಿ ಸಂಗಮ. ಸೋಮನಾಥ ಕ್ಷೇತ್ರವನ್ನು ಸಂದರ್ಶಿಸಿ, (ಪುರಾಣಗಳ ಪ್ರಕಾರ ಮೊದಲ ಜ್ಯೋತಿರ್ಲಿಂಗರೂಪದಲ್ಲಿ “ಸೋಮನಾಥೇಶ್ವರ’ ಉದ್ಭವಿಸಿದ್ದಾನೆ) ನಾವೆಲ್ಲ ಪುನೀತರಾದೆವು.

ರಾತ್ರಿ ವೇರಾವೆಲ್ ಎಂಬ ನಗರದಲ್ಲಿ ವಿಶ್ರಾಂತಿ. ತಾ.07–10–2015ರಂದು ವೇರಾವಲ್ ನಗರದಿಂದ ಅಹಮದಾಬಾದ್ ನಗರ ಪ್ರಯಾಣ ಸುಮಾರು 400 ಕಿ.ಮೀ ದೂರ. ಬಸ್ಸಿನಲ್ಲಿ ರಾ.ಹೆ.51 ಹಾಗೂ 151ರ ಮುಖಾಂತರ ಜುನಾಗಢ ಜಿಲ್ಲೆಯ ಗಿರ್‌ನಾರ್ ಎಂಬ ಬೆಟ್ಟದ ತಪ್ಪಲಲ್ಲಿ ಪ್ರಯಾಣಿಸಿದೆವು. ದತ್ತಗುರು ತಪಸ್ಸು ಮಾಡಿದ 9999 ಮೆಟ್ಟಲುಗಳಿರುವ ಆ ಬೆಟ್ಟವನ್ನು ಹತ್ತುವ ಭಾಗ್ಯ ನಮಗಿರಲಿಲ್ಲ. ಕಾರಣ ನಮ್ಮ ಪ್ರವಾಸ ಪಟ್ಟಿಯಲ್ಲಿಲ್ಲ. ಜೇಟ್ಪುರ–ರಾಜಕೋಟ್ ಮಾರ್ಗವಾಗಿ ರಾ.ಹೆ.27ರಲ್ಲಿ ‘ಚೋಟೇಲಾಮಾ’ದ (ಗುಜರಾತಿಗಳ ಯಾತ್ರಾಸ್ಥಳ) ಮುಖಾಂತರ ಸಂಜೆ 4 ಗಂಟೆಗೆ ಅಹಮದಾಬಾದ್ ತಲುಪಿದೆವು. ಗುಜರಾತಿ ಭಾಷೆಯಲ್ಲಿ ಇದು ಅಮದಾಬಾದ್. 12ನೇ ಶತಮಾನದಲ್ಲಿ ಇದು ಕರ್ಣಾವತಿ ಆಗಿತ್ತಂತೆ. ಸುಲ್ತಾನ್ ಅಹಮದ್ ಷಾ ನಿಂದ ಅಹಮದಾಬಾದಾಯ್ತು. ಇದು ಸಬರಮತಿ ನದಿ ದಡದಲ್ಲಿದೆ. ರಾಜಧಾನಿ–ಗಾಂಧೀನಗರ–ಅಹಮದಾಬಾದ್ ಅವಳಿ ಪಟ್ಟಣಗಳು. ಕೈಗಾರೀಕರಣದಿಂದ ಈ ಸುಂದರ ನಗರ ಮಲಿನತೆಯಲ್ಲಿ 2ನೇ ಸ್ಥಾನದಲ್ಲಿದೆಯಂತೆ. ಮೊದಲ ಸ್ಥಾನ ದೆಹಲಿಗೆ ಹಾಗೂ ಕಲ್ಕತ್ತಾಕ್ಕೆ 3ನೇ ಸ್ಥಾನ. ರಾತ್ರಿ ವಾಸ್ತವ್ಯ: ಹೋಟೆಲ್ ಕ್ಯಾಂಬೇ ಸಫೈರ್‌ನಲ್ಲಿ.

ತಾ.08–10–2015ರಂದು ಬೆಳಗ್ಗೆ ISCON. (ಈಸ್ಕೋನ್) ಕೃಷ್ಣ ದೇವಾಲಯಕ್ಕೆ ಬೇಟಿ. ಇಲ್ಲಿ ಸ್ವಚ್ಚತೆಗೆ ಆದ್ಯತೆ. ಅವರ ಪೂಜಾದಿಗಳೇ ವಿಶಿಷ್ಟ. ನಂತರ ಸಬರಮತಿ ಆಶ್ರಮದ ಸಂದರ್ಶನ. ಗಾಂಧೀ ಮೆಮೋರಿಯಲ್ ಮ್ಯೂಸಿಯಂ, ಗಾಂಧೀಜಿಯವರ ಮನೆ. ಹೃದಯ ಕುಂಜ, ಕಸ್ತೂರ್ಬಾರವರ ಕೋಣೆ, ವಿನೋಬಾ ಭಾವೆ–ಮೀರಾ ದಂಪತಿಗಳ ಕುಟೀರ ಇತ್ಯಾದಿ ಸಂದರ್ಶಿಸಿದೆವು. ರಾಷ್ಟ್ರಪಿತ ಬಾಪೂ ಬಗ್ಗೆ ಕೆಲವು ಬರಹ/ ಮಾಹಿತಿಗಳು ಆಶ್ರಮದಲ್ಲಿದ್ದಂತೆ: TRUTH IS GOD– ಸತ್ಯ ಹೀ ಈಶ್ವರ ಹೈ ಅವರು ಸ್ವತಃ ನೂಲುತ್ತಿದ್ದ ಚರಕ (Spinning Wheel) ದಂಡಿ ಸತ್ಯಾಗ್ರಹ–12–03–1930. ಹರಿಜನ ಮದುವೆ: ಸೇವಾಗ್ರಾಮದಲ್ಲಿ ತಾ.06–09–1940 ಅಸ್ಪ್ರಶ್ಯತಾ ನಿವಾರಣೆ. ಮರ್‌ತೇ ಭೀ ಸತ್ಯ ನಹೀ ಛೋಡನಾ. ಇತ್ಯಾದಿ ಗಾಂಧೀಜೀಯವರು 11 ಭಾಷೆಗಳಲ್ಲಿ ಸಹಿ ಮಾಡಿದ್ದಾರೆ. ಕನ್ನಡ ಭಾಷೆ ಸೇರಿ. ನಂತರ ವೈಷ್ಣೋದೇವಿ ಮಂದಿರ ದರ್ಶನ. ಸರ್‌ಖೇಜ್ ಗಾಂಧೀನಗರ ಹೈವೇಯಲ್ಲಿ ಹರ್‍ಯಾಣದಲ್ಲಿ ಜನಸಿದ ಮುಖೇಶ್ ಬ್ಯಾವರ್ಮಾರವರು ಕಟ್ಟಿಸಿದ ಕಲ್ಲುಬಂಡೆಯ ಗುಹೆಯೊಳಗೆ ಎತ್ತರಕ್ಕೇರುತ್ತಾ ‘ಹೋರಾಜ ವೈಷ್ಣೋದೇವಿ’ ಗುಹಾಮಂದಿರ ದರ್ಶನ. ಇದು 1999ರಲ್ಲಿ ಶ್ರೀ ಎಲ್.ಕೆ. ಅದವಾನಿಯವರಿಗೆ ಉದ್ಘಾಟಿಸಲ್ಪಟ್ಟಿತ್ತು. ನರೇಂದ್ರ ಮೋದಿಜಿಯವರೂ ಆಗಮಿಸಿದ್ದರು. ಸ್ವಲ್ಪ ದೂರಲ್ಲಿ, ಅದಲಾಜ್ ಮೆಟ್ಟಲು ಬಾವಿ (ಗುಜರಾತಿಯಲ್ಲಿ ವಾವ್) ಯನ್ನು ಕಟ್ಟಿಸಿದವರು ‘ರುಢಾ’ ಎಂಬ ಮಹಿಳೆ ಇಸವಿ 1555ರಲ್ಲಿ. ಇವರು ವಘೇಲ ವೀರಸಿಂಹನ ಮಡದಿ. ಈ 5 ಅಂತಸ್ತಿನ ಗೋಪುರವಿರುವ ಕಲಾತ್ಮಕ ನಿರ್ಮಾಣವಾದ ಬಾವಿಯಲ್ಲಿ ಸುತ್ತ ಮುತ್ತಲ ನೀರಿಗೆ ತತ್ವಾರವಾದರೂ ನೀರು ಬತ್ತುವುದಿಲ್ಲ. ಕೆಲವು ವರ್ಷಗಳ ಹಿಂದೆ ತಯಾರಾದ ಕಲಾತ್ಮಕ ‘ರುಢಾಲಿ’ ಸಿನಿಮಾಕ್ಕೆ ಇದೇ ಪ್ರೇರಣೆ ಇರಬಹುದು. ಸಂಜೆಗೆ “ಸ್ವಾಮಿ ನಾರಾಯಣ’ ಮಂದಿರದ ವೀಕ್ಷಣೆ ಇಷ್ಟು ಭವ್ಯವಾದ ಮಂದಿರ ಹಾಗೂ ಅದರಲ್ಲಿರುವ ಪ್ರದರ್ಶನಗಳು ಬೇರೆಕಡೆ ಸಿಗಲಾರವು. ಕತ್ತಲಾಗುತ್ತಾ ‘ಲೇಸರ್’ ಬೆಳಕಿನ ಮುಖಾಂತರ ತೋರಿಸಿದ “ನಚಿಕೇತ’ನ ಕಥಾವಸ್ತು ವರ್ಣಿಸಲಸದಳ. ಆ ಕಡೆ ಪ್ರವಾಸ ಮಾಡಿದರೆ ಈ ಮಂದಿರ ಮತ್ತು ಲೇಸರ್ ಬೆಳಕಿನ ಕಾರ್ಯಕ್ರಮ ಮರೆಯದೆ ನೋಡಿ.

ಮಾರನೇ ದಿನ (ತಾ.09–10–2015) ಅಹಮದಾಬಾದಿನಲ್ಲಿ ವಿಶ್ರಾಂತಿ ಹಾಗೂ ನಾವು ಇಚ್ಛಿಸಿದ ಸ್ಥಳಗಳ ಭೇಟಿ. ನಮ್ಮ ಸ್ವಂತ ವ್ಯವಸ್ಥೆಯಲ್ಲಿ ವಸ್ತುಗಳ ಖರೀದಿಗೆ ಬಿಡುವು. ನಮ್ಮವರೊಂದಿಗೆ ದಾಲ್ಗರ್‌ವಾಡ ಮಾರ್ಕೆಟಿಗೆ ಭೇಟಿ. ಬಟ್ಟೆ ಬರೆ ಖರೀದಿ. ಮಾರ್ಕೆಟ್ ವಿಶಾಲ ಪ್ರದೇಶದಲ್ಲಿದ್ದರೂ ಜನರ ನೂಕುನುಗ್ಗಲು ಇಕ್ಕಾಟ್ಟಾದ ದಾರಿ, ಎಲ್ಲೆಂದರಲ್ಲಿ ಅಂಗಡಿಗಳು. ವಾಹನಗಳ ಪರದಾಟ, ಮೋಟರ್ ಸೈಕಲನ್ನು ರಿಕ್ಷಾವಾಗಿ ಮಾರ್ಪಡಿಸಿ ಓಡಾಡಿಸುವ ರೀತಿ, ಇತ್ಯಾದಿಗಳಿಂದ ಮನಸ್ಸಿಗೆ ಕಿರಿಕಿರಿ. ಬೆಲೆಯಲ್ಲೂ ನಮ್ಮೂರಿಗೂ ಅಲ್ಲಿಗೂ ಹೆಚ್ಚಿನ ವ್ಯತ್ಯಾಸವಿಲ್ಲ.

ಸಂಜೆಗೆ ಗುಜರಾತ್‌ನ ಹೆಮ್ಮೆಯಾದ ‘ಸಯನ್ಸ್ ಸಿಟಿ’ಗೆ ಹೋದೆವು. ಇಲ್ಲಿ ಏರೋಥ್ರಿಲ್ ರೈಡ್, ಪ್ಲೆನೆಟೋರಿಯಂ, ಗ್ಲೋಬಲ್ ಪ್ಲಾನೆಟ್, ಭೂಕಂಪದ ಅನುಭವವಾಗುವ ಶಬ್ಧ ಹಾಗೂ ದೃಶ್ಯದ ವೀಕ್ಷಣೆ. ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅಗತ್ಯವಾದ ಆಟ–ಪಾಠ–ಅನುಭವಗಳು ಇಲ್ಲಿ ಲಭಿಸುತ್ತದೆ. ಇಲ್ಲಿಯ ಸಿಬ್ಬಂದಿಗಳು ಸಹಕರಿಸಿದರೆ ಇದೊಂದು ಮಾದರಿ “ಸಿಟಿ”ಯಾಗಿ ಉಳಿಯಬಹುದು. ಸರಕಾರದ ನಿರ್ಲಕ್ಷ್ಯ ಕಾಣಿಸುತ್ತಿದೆ.

ರಾತ್ರಿಯಾಗುತ್ತಾ, ನಗರ ಮಧ್ಯೆ ಇರುವ ಕಾಂಕರ್ಯ ಸರೋವರಕ್ಕೆ ಭೇಟಿ. ಅಹಮದ್‌ಸಬಾದಾಹ್ ಎಂಬ ಮುಸಲ್ಮಾನ ದೊರೆ ಕಟ್ಟಿಸಿದ್ದಂತೆ. ಈ ಸರೋವರವನ್ನು ಬಹಳ ಸುಂದರವಾಗಿ ದೀಪಾಲಂಕಾರ ಮಾಡುತ್ತಾರೆ. ನಾನಾ ರೀತಿಯ ಕಾರಂಜಿಗಳ ಮಧ್ಯೆ ದೋಣಿಯಾನ, ಸರೋವರದ ಸುತ್ತ ಸುತ್ತಲು ಮಕ್ಕಳ ಉಗಿಬಂಡಿ, ವಸ್ತು ಪ್ರದರ್ಶನ, ತಿಂಡಿತಿನಿಸುಗಳ ಕ್ಯಾಂಟೀನ್‌ಗಳು, ಇತ್ಯಾದಿ ಇದ್ದು ಸಣ್ಣ ಮಕ್ಕಳಿಗೆ ಹಿಡಿದು, ಪ್ರೇಮಿಗಳಿಗೆ, ವಯಸ್ಕರಿಗೆ ಸಂಭ್ರಮವೋ ಸಂಭ್ರಮ. ದೇಶದಲ್ಲಿ ಗುಜರಾತಿನ ಮೊದಲ ಸರೋವರ ದಂಡೆಯ ಅಭಿವೃದ್ಧಿ (First Lake front Development) ಇದಾಗಿದೆ. ಸಂಜೆಯಾಗುತ್ತಾ ಈ ಜಾಗ ಕಳೆಕಟ್ಟುತ್ತದೆ. ಇಲ್ಲಿಯ ವ್ಯಾಪಾರಸ್ಥರು ಸಾಕಷ್ಟು ಶುಚಿ ರುಚಿಯಾದ ತಿಂಡಿ ತಿನಿಸುಗಳನ್ನು ನೀಡುತ್ತಾರೆ. ಸರೋವರದ ಸುತ್ತಮುತ್ತ ಶುದ್ಧ ಪರಿಸರವಿದೆ. ಅಹಮದಾಬಾದ್‌ಗೆ ಬಂದವರು ಖಂಡಿತಾ ಈ ಸರೋವರಕ್ಕೆ ಭೇಟಿ ನೀಡಿ ಅವಿಸ್ಮರಣೀಯವಾಗಿಸಿಕೊಳ್ಳಿ.

ಮುಖ್ಯಮಂತ್ರಿಯಾಗಿ ನರೇಂದ್ರ ಮೋದಿಯವರು ಗುಜರಾತಿನ ಸರ್ವತೋಮುಖ ಅಭಿವೃದ್ಧಿಗೆ ಬಹಳ ಶ್ರಮಪಟ್ಟಿದ್ದಾರೆ. ಗ್ರಾಮೀಣಾಭಿವೃದ್ಧಿ, ಕೈಗಾರಿಕೀಕರಣ, ಉದ್ಯೋಗ, ವ್ಯಾಪಾರ, ವ್ಯವಹಾರ ಹಾಗೂ ಬಡವರ ಸಂಕಷ್ಟಗಳಿಗೆ ಸ್ಪಂದಿಸಿದ್ದಾರೆ. ರಾಜ್ಯ ರಸ್ತೆ–ಹೆದ್ದಾರಿಗಳ ಅಗಲೀಕರಣ, ಎಲ್ಲಾ ಸ್ಥರಗಳಲ್ಲೂ ತಮ್ಮ ಚಾಕಚಕ್ಯತೆ ತೋರಿ ಇಂದು ದೇಶದ ಪ್ರಧಾನಿಯಾಗಿದ್ದಾರೆ. ಅಹಮದಾಬಾದ್ ಪಟ್ಟಣದಲ್ಲಿ ಸರಕಾರಿ ಸಾರಿಗೆಗಳಿಗೆಂದೇ ಬೇರೆ ರಸ್ತೆ ರಚಿಸಿ ಮಧ್ಯೆ ವಾಹನ ನಿಲ್ದಾಣಗಳನ್ನು ಕಟ್ಟಿಸಿ ಜನರ ಉಪಯೋಗಕ್ಕೆ ಅನುಕೂಲ ಮಾಡಿದ್ದಾರೆ. ಆದರೆ ಪ್ರಕೃತಿ ತನ್ನ ವಿಕೋಪ ತೋರಿಸುತ್ತಾ ಇತ್ತೀಚಿಗೆ ಒಂದು ವರ್ಷದಿಂದ ಮಳೆಯಾಗದೆ ರಾಜ್ಯ ತೊಂದರೆಯಲ್ಲಿದೆ. ಗೋಸಂಪತ್ತು ನೋಡಬೇಕಾದರೆ ಗುಜರಾತಿಗೆ ಹೋಗಬೇಕು. ರಾಷ್ಟ್ರ ರಾಜಕೀಯಕ್ಕೆ ಬಂದನಂತರ ಗುಜರಾತಿನಲ್ಲಿ ಅಭಿವೃದ್ಧಿ ಸ್ವಲ್ಪ ಕುಂಠಿತವಾಗುತ್ತಿದೆಯೆಂದು ಕೆಲವರ ಅಭಿಪ್ರಾಯ. ಹಿಂತಿರುಗುವ ಮೊದಲು ನಾನು 3–4 ಮಂದಿಯಲ್ಲಿ ಈಗಿನ ರಾಜಕೀಯದ/ಅಭಿವೃದ್ಧಿ ಬಗ್ಗೆ ವಿಚಾರಿಸಿದಾಗ “ಹಿಂದಿಗೂ ಇಂದಿಗೂ ತುಂಬಾ ಅಂತರವಿದೆ. ಮೋದಿ ಸಾಹೇಬ್ರು ಇಲ್ಲೇ ಇದ್ದಿದ್ದರೆ ಗುಜರಾತ್ ಸ್ವರ್ಗವಾಗುತ್ತಿತ್ತು. ಸದ್ಯಕ್ಕೆ ಸರಕಾರಕ್ಕೆ ತೊಂದರೆ ಇಲ್ಲ. ಮುಂದಿನ ದಿನಗಳಲ್ಲಿ ಬದಲಾವಣೆ ಆಗಲೂಬಹುದು” ಎಂಬ ಅಭಿಪ್ರಾಯ ಬಂತು.

ತಡೆಯಲಾಗದ ಸೆಖೆಯಿಂದ ನಮ್ಮ ಪ್ರವಾಸಕ್ಕೆ ಸ್ವಲ್ಪ ಪ್ರಯಾಸವಾದರೂ ಹಿಂತಿರುಗಿ ಉಡುಪಿ ಮುಟ್ಟುವಾಗ (ತಾ.11–10–2015 ಸಂಜೆ 4.30ಕ್ಕೆ) ಏನೋ ಅವ್ಯಕ್ತ ಭಾವನೆ (ಅಗಲುವಿಕೆಯ) ಮನದಲ್ಲಾಯ್ತು.

ನಮ್ಮನ್ನು ಈ ಪ್ರವಾಸಕ್ಕೆ ಕರೆದೊಯ್ದ ಹೆಸರುವಾಸಿಯಾದ ನಿರ್ಮಲಾ ಟ್ರಾವೆಲ್ಸ್, ಮಂಗಳೂರು ಇವರಿಗೆ ಕೃತಜ್ಞತೆಗಳು ಹಾಗೂ ನಾವೆಲ್ಲ ಸಲಹೆಕೊಟ್ಟಂತೆ ಸೆಕೆಗಾಲದಲ್ಲಿ ವಾತಾನುಕೂಲ ಬಸ್ಸುಗಳ ವ್ಯವಸ್ಥೆ ಮಾಡಲೇಬೇಕು. ಮಾರ್ಗದರ್ಶಿಯಾಗಿ ನನ್ನ ಲೇಖನಕ್ಕೆ ಮಾಹಿತಿ ನೀಡಿದ್ದ ಸಿದ್ಧಕಟ್ಟೆ ಗೈಡ್ ಗಣೇಶರಿಗೆ ಹಾರ್ದಿಕ ಅಭಿನಂದನೆಗಳು.

ಪ್ರಯಾಣದಲ್ಲಿ ಕೆಲವು ಕಡೆ ಮಾಹಿತಿ ಸರಿಯಾಗಿ ಸಿಗದೆ ತಪ್ಪು ನುಸುಳಿದ್ದರೆ ಸರಿಪಡಿಸುವ ಹೃದಯ ವೈಶಾಲ್ಯತೆ ಓದುಗರಿಗಿರಲಿ.

ಕೆಲವರು “ಮೋಡಿ ಮಾಡದ ಮೋದಿ ರಾಜ್ಯ”ವೆಂದು ವ್ಯಂಗ್ಯವಾಡಿದರೂ, ನನಗೆ ಮಾತ್ರ “ಮೋದಿ ರಾಜ್ಯ ಮೋಡಿ ಮಾಡಿತು” ನಮೋ ದ್ವಾರಕಾಧೀಶ!

ವರದಿ : **ಜಿ.ಕೆ ಕೊಲ್ಪೆ**

## ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 16-11-2015 | ವೃಶ್ಚಿಕ ಸಂಕ್ರಮಣ, ಪ್ರಥಮ ಕಾರ್ತಿಕ ಸೋಮವಾರ |
| 20-11-2015 | ಅನುರಾಧ ಮಹಾನಕ್ಷತ್ರ |
| 22-11-2015 | ಸರ್ವೈಕಾದಶಿ, |
| 23-11-2015 | ಉತ್ಥಾನ ದ್ವಾದಶಿ ತುಳಸಿ ಪೂಜೆ |
| 25-11-2015 | ಹುಣ್ಣಿಮೆ |
| 29-11-2015 | ಸಂಕಷ್ಟಹರ ಚೌತಿ |
| 30-11-2015 | ಕಾರ್ತಿಕ ಸೋಮವಾರ |
| 03-12-2015 | ಜ್ಯೇಷ್ಠಾ ಮಹಾನಕ್ಷತ್ರ |
| 07-12-2015 | ಸರ್ವೈಕಾದಶಿ, ಕಡೆಯ ಸೋಮವಾರ |
| 11-12-2015 | ಅಮಾವಾಸ್ಯೆ |
| 16-12-2015 | ಧನು ಸಂಕ್ರಮಣ |

॥ ಶ್ರೀ ಮಹಾಗಣಪತಿ ಪ್ರಸನ್ನಃ ॥ ॥ ಶ್ರೀ ವಿಷ್ಣುಮೂರ್ತಿ ಪ್ರಸನ್ನಃ ॥ ॥ ಶ್ರೀ ಶಾಸ್ತಾವು ಪ್ರಸನ್ನಃ ॥



ಶ್ರೀ ಕ್ಷೇತ್ರ ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಾರೀಕು 21-11-2015ನೇ ಶನಿವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ಕ್ಷೇತ್ರದಲ್ಲಿ ವಿರಾಜಮಾನರಾದ ಶ್ರೀ ಕ್ಷೇತ್ರದ ಅಧಿಪತಿ ಶ್ರೀ ವಿಷ್ಣುಮೂರ್ತಿ ದೇವರು ಹಾಗೂ ಉಪದೇವರುಗಳಾದ ಶ್ರೀ ಮಹಾಗಣಪತಿ ಹಾಗೂ ಶಾಸ್ತಾವು ದೇವರುಗಳ

## ರಜತ ಕವಚ ಸಮರ್ಪಣೆ ಹಾಗೂ ರಜತೋತ್ಸವವು

ನಡೆಯಲಿದೆ.

ಭಕ್ತಾಭಿಮಾನಿಗಳಾದ ತಾವೆಲ್ಲರೂ ಬಂಧುಮಿತ್ರರೊಡಗೂಡಿ ಶ್ರೀ ಕ್ಷೇತ್ರಕ್ಕೆ ಬಂದು ಈ ಉತ್ಸವದಲ್ಲಿ ಪಾಲ್ಗೊಂಡು ಶ್ರೀ ದೇವರ ಕೃಪಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ವಿನಂತಿಸುವ

**- ಆಡಳಿತ ಮಂಡಳಿ ಹಾಗೂ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ.**

ವಿ.ಸೂ : ಶ್ರೀ ಕ್ಷೇತ್ರದ ಪೂಜಾ ಕೈಂಕರ್ಯಗಳು ನಿರ್ವಿಘ್ನವಾಗಿ ನಡೆಯಲೆಂದು ಶ್ರೀ ಕ್ಷೇತ್ರದ ಸಮೀಪದಲ್ಲಿ ಶ್ರೀ ದೇವರ ಅರ್ಚಕರಿಗೆ 'ಅರ್ಚಕ ನಿವಾಸ' ಎಂಬ ನಾಮಾಂಕಿತ ನೂತನ ಗೃಹವು ನಿರ್ಮಾಣಗೊಂಡಿದ್ದು. ಅದರ ಗೃಹಪ್ರವೇಶವು ತಾರೀಕು 21-11-2015ನೇ ಶನಿವಾರ ಬೆಳಿಗ್ಗೆ ನಡೆಯಲಿರುವುದು. ಭಕ್ತಾಭಿಮಾನಿಗಳು ತನು-ಮನ-ಧನಗಳಿಂದ ಸಹಕರಿಸಬೇಕಾಗಿ ವಿನಂತಿಸುವ

-ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿ

# ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಸೋಣಾರತಿ



ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಸರಿಸುಮಾರು 900 ವರ್ಷಗಳ ಮೊದಲು ಇತ್ತೆಂದು ಇತಿಹಾಸ ತಜ್ಞರು ತಿಳಿಸಿರುತ್ತಾರೆ. ಅಂತೆಯೇ ಹಿಂದಿನ ದಿನಗಳಲ್ಲಿ ಈ ಕ್ಷೇತ್ರವು ತುಂಬಾ ಪ್ರಸಿದ್ಧಿ ಪಡೆದ, ತುಂಬಾ ರೀತಿಯ ಪೂಜೆ ಪುನಸ್ಕಾರಗಳು ನಡೆಯುತ್ತಿತ್ತೆಂದು ತಿಳಿದಿರುತ್ತದೆ. ಕಾಲಕಾಲದ ಏರುಪೇರುಗಳಂತೆ ಶ್ರೀ ಕ್ಷೇತ್ರವು ಅಜೀರ್ಣಗೊಂಡಿದ್ದು ಇತ್ತೀಚಿನ ಕೆಲವು ವರ್ಷಗಳಲ್ಲಿ ಎರಡು ಹಂತಗಳಲ್ಲಿ ಜೀರ್ಣೋದ್ಧಾರಗೊಂಡಿರುತ್ತದೆ. ಈಗಿನ ದಿನಗಳಲ್ಲಿ ಶ್ರೀ ಕ್ಷೇತ್ರದಲ್ಲಿ ಶಾಸ್ತಾವು ಹಾಗೂ ಮಹಾಗಣಪತಿ ದೇವರುಗಳನ್ನು ಪ್ರತಿಷ್ಠಾಪನೆಗೊಳಿಸಲಾಗಿದೆ. ಅಂತೆಯೇ ಈಗ ಈ ಕ್ಷೇತ್ರವು ತುಂಬಾ ಸಾನಿಧ್ಯದಿಂದ ಕೂಡಿರುತ್ತದೆ. ಭಕ್ತರ ಆಸೆ ಆಕಾಂಕ್ಷೆಗಳನ್ನು, ಕಷ್ಟ-ನಷ್ಟಗಳನ್ನು ಶ್ರೀ ದೇವರಲ್ಲಿ ವಿನಂತಿಸಿಕೊಂಡರೆ ಶ್ರೀ ದೇವರ ಅನುಗ್ರಹವು ಕೂಡಲೇ ದೊರೆಯುತ್ತದೆಂದು ಪ್ರಸಿದ್ಧಿಯಾಗಿದೆ. ಹಾಗೆಯೇ ಶ್ರೀ ಕ್ಷೇತ್ರದ ತಂತ್ರಿಗಳಾದ ಶ್ರೀಯುತ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ ಶ್ರೀ ಕ್ಷೇತ್ರದಲ್ಲಿ ಕಳೆದ ವರುಷ ಮತ್ತು ಈ ವರುಷದಲ್ಲಿ ಸೋಣಾರತಿ ಬಹಳ ವಿಜೃಂಭಣೆಯಿಂದ ನಡೆದಿರುತ್ತದೆ. ಸೋಣಾ ಎಂಬುದು ಹಿಂದೂ ಧರ್ಮದ ಅತ್ಯಂತ ಪವಿತ್ರವಾದ ತಿಂಗಳು. ಅಂತೆಯೇ ಈ ಸಮಯದಲ್ಲಿ ಶ್ರೀಕ್ಷೇತ್ರದಲ್ಲಿ ವಿಶೇಷ ಪೂಜೆ ಪುನಸ್ಕಾರಗಳನ್ನು ನಡೆಸಿದಲ್ಲಿ ಶ್ರೀ ದೇವರ ಅನುಗ್ರಹವು ಕ್ಷಿಪ್ರಕಾಲದಲ್ಲಿ ದೊರೆಯುತ್ತದೆಂದು ತಿಳಿದವರು ತಿಳಿಸಿರುತ್ತಾರೆ. ಅಂತೆಯೇ ಕಳೆದ ಸಾಲಿನ ಸೋಣಾರತಿಯ ಸಮಯದಲ್ಲಿ ಶ್ರೀ ಕ್ಷೇತ್ರದಲ್ಲಿ ಪೂಜೆ ಪುನಸ್ಕಾರ ನೀಡಿದವರಿಗೆ ಉತ್ತಮ ರೀತಿಯ ಫಲ ಸಿಕ್ಕಿರುತ್ತದೆ; ಹೀಗಾಗಿ ಈ ವರುಷದಲ್ಲಿ ಶ್ರೀ ಕ್ಷೇತ್ರದಲ್ಲಿ ದಿನಾಲು ನೂರಕ್ಕಿಂತ ಹೆಚ್ಚು ಭಕ್ತರು ಸೇರಿ ಸಂಜೆಯ ವಿಶೇಷ ಪೂಜೆಯಾದ ಸೋಣಾರತಿ ಎಂಬ ಪೂಜೆಯನ್ನು ಒಂದು ತಿಂಗಳು ನಡೆಸಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುತ್ತಾರೆ.

ವರದಿ : **ಆಡಳಿತ ಮಂಡಳಿ**

**ಶ್ರೀ ವಿಷ್ಣುಮೂರ್ತಿ ದೇವಸ್ಥಾನ,ಪಾದೆಬೆಟ್ಟು**

# ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನ

ರಾಮದಾಸನಗರ ,ಕೂಡ್ಲು, ಕಾಸರಗೋಡು

## ಪುತ್ರಕಾಮೇಷ್ಠಿ ಯಾಗ, ಧನ್ವಂತರಿ ಹವನ

ಮಕ್ಕಳಿಲ್ಲದ ದಂಪತಿಗಳ ದುಃಖವನ್ನು ನಿವಾರಿಸಲು, ಅಂತೆಯೇ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಉತ್ತಮ ಆರೋಗ್ಯಯುತ ಜೀವನಕ್ಕೆ ಸಹಕಾರಿಯಾಗುವ ಉದ್ದೇಶದಿಂದ ಕಾಸರಗೋಡು ಜಿಲ್ಲೆಯ ಕೂಡ್ಲು ಗ್ರಾಮದ ಕುತ್ಯಾಳ ಶ್ರೀ ಸಂತಾನ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ 2015ನೇ ಡಿಸೆಂಬರ್ 24ನೇ ಗುರುವಾರ ಹಾಗೂ 25ನೇ ಶುಕ್ರವಾರದಂದು ಅತಿ ಅಪೂರ್ವವಾದ ಪುತ್ರ ಕಾಮೇಷ್ಠಿ ಯಾಗ ಹಾಗೂ ಧನ್ವಂತರಿ ಹವನವನ್ನು ಹಮ್ಮಿಕೊಳ್ಳಲಾಗಿದೆ.

ಇದರಲ್ಲಿ ಭಾಗವಹಿಸಲಿಚ್ಛಿಸುವವರಿಗೆ ಅವರವರ ಅಗತ್ಯಕ್ಕನುಸಾರವಾಗಿ ಆಯುರ್ವೇದ ಔಷಧ, ಆಸನ, ಪ್ರಾಣಾಯಾಮ, ಧ್ಯಾನ, ಯೋಗ,ವ್ರತ ಇತ್ಯಾದಿಗಳನ್ನು ಕಲಿಸಿಕೊಡಲಾಗುವುದು. ಇವು ಮನುಷ್ಯನ ಶಾರೀರಿಕ ಸಮಸ್ಯೆಗಳಾದ ಕೈಕಾಲು ಸೆಳೆತ, ನಿರಂತರ ತಲೆಸಿಡಿತ,ಖಿನ್ನತೆ, ಮಾನಸಿಕ ವ್ಯಾಧಿ, ಹೃದಯ ಸಂಬಂಧಿ ರೋಗಗಳು, ಉದರ ವೇದನೆ, ನರ ದೌರ್ಬಲ್ಯ ಮುಂತಾದ ಎಲ್ಲ ರೀತಿಯ ನೋವನ್ನು ಬಗೆಹರಿಸಲು ಸಹಕಾರಿಯಾಗುವುದು.

ಸುಮಾರು 350 ವರುಷಗಳ ಹಿಂದೆ ಸಂತಾನ ಪ್ರಾಪ್ತಿಗಾಗಿ ಕೂಡ್ಲು ಶ್ಯಾನುಭಾಗ ಮನೆತನದವರಿಂದ ಪ್ರತಿಸ್ಥಾಪಿಸಲ್ಪಟ್ಟ ಕುತ್ಯಾಳ ಶ್ರೀ ಗೋಪಾಲಕೃಷ್ಣ ಸ್ವಾಮಿ ದೇವಸ್ಥಾನದಲ್ಲಿ ಸಂತಾನವಿಲ್ಲದ ಅದೆಷ್ಟೊ ದಂಪತಿಗಳು ಪ್ರಾರ್ಥನೆ, ಪೂಜೆ ಸಲ್ಲಿಸಿ ಸಂತಾನ ಪ್ರಾಪ್ತಿಗಳಿಸಿಕೊಂಡಿದ್ದಾರೆ. ಇಂತಹ ಘಟನೆಗಳು ವೈದ್ಯ ಜಗತ್ತಿಗೆ ಸವಾಲಾಗಿ ಈಗಲೂ ನಡೆಯುತ್ತಿದ್ದು, ಈ ಪವಿತ್ರ ಸ್ಥಳವನ್ನೇ ಪುತ್ರಕಾಮೇಷ್ಠಿಯಾಗ ಹಾಗೂ ಧನ್ವಂತರಿ ಹವನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಗ್ರಾಮೋತ್ಥಾನ ಸೇವಾ ಸಮಿತಿ, ಕುಂಬಳೆ ಸೀಮೆ ಇದರ ಆಶ್ರಯದಲ್ಲಿ ನಡೆಯುವ ಈ ಅಪೂರ್ವ ಕಾರ್ಯಕ್ರಮದಲ್ಲಿ ಎಲ್ಲಾ ಹಿಂದು ಬಾಂಧವರು ಶ್ರದ್ಧೆ ಹಾಗೂ ಭಕ್ತಿಯಿಂದ ಭಾಗವಹಿಸಿ ನಮ್ಮ ಸಮಾಜದ ದುಃಖಿತರ ನೋವನ್ನು ನಿವಾರಿಸಲು ಸಹಕರಿಸಬೇಕಾಗಿ ವಿನಂತಿ.

**ಮಾಹಿತಿಗಾಗಿ ಸಂಪರ್ಕಿಸಿ : ಕೆ.ಜಿ.ಶ್ಯಾನುಭೋಗ್, ಅನುವಂಶಿಕ ಮೊಕ್ತೇಸರರು.**
**ಮೊಬೈಲ್ : 9495460277, 9495535252, 9446772355, 9495417793**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.29-11-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.15-11-2015 ಮತ್ತು ತಾ.12-12-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.30-11-2015 ಹಾಗೂ ತಾ.16-12-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

**ಮೊಬೈಲ್- 9886629697, 9986119865**




*Krishna Rao*

Ph : 2520652
Mob. : 9902029048

**KISHAN**






**Studio & Video**

**Indoor Photography & Port Folio Photography, Video & Mixing, Lamination**

MAIN ROAD, MAJOOR & BANTAKAL.



ಪ್ರೊ : ಸುಧಾಕರ್ ರಾವ್ ಬೆಳ್ಳೆ



**ಶ್ರೀಮಾತಾ ಇಲೆಕ್ಟ್ರಾನಿಕ್ಸ್**

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

# ಶಂಕರ ಪ್ರತಿಷ್ಠಾನದಿಂದ ಪ್ರವಾಸ

ಶಂಕರ ಪ್ರತಿಷ್ಠಾನ, ಕಾರ್ಕಳದ ಕಾರ್ಯಕ್ರಮಗಳಲ್ಲಿ ವರ್ಷಾವಧಿ ಪ್ರವಾಸವೂ ಒಂದು ಮುಖ್ಯ ಕಾರ್ಯಕ್ರಮವಾಗಿದೆ. ಈ ವರ್ಷ 46 ಸದಸ್ಯರು ಹಾಗೂ 6 ಎಳೆಯರು ಪ್ರವಾಸದಲ್ಲಿ ಭಾಗವಹಿಸಿದರು. ದಿನಾಂಕ 11-10-2015ನೇ ಆದಿತ್ಯವಾರ ಕಾರ್ಕಳ ಶ್ರೀ ಅನಂತಪದ್ಮನಾಭ ಸ್ವಾಮಿಯ ಅನುಗ್ರಹ ಯಾಚಿಸಿ ‘ವಿಶಾಲ್’ ಕಂಪೆನಿಯ ಬಸ್ಸಿನಲ್ಲಿ ಹೊರಟೆವು. ಹಾದಿಯಲ್ಲಿ ಕಾಡು ಹೊಳೆಯಲ್ಲಿ ಶ್ರೀ ಸುಬ್ರಹ್ಮಣ್ಯ ದಂಪತಿಗಳು, ಮುನಿಯಾಲಿನಲ್ಲಿ ಶ್ರೀ ರಾಮಮೋಹನ ರಾಯರೂ ಜೊತೆಗೂಡಿದರು.

ಹೆಬ್ರಿಗೆ ಮುಟ್ಟುವಾಗ ಎಲ್ಲರ ಹೊಟ್ಟೆಯೂ ಚುರುಗುಡುತ್ತಿತ್ತು. ಅಲ್ಲಿ ಶ್ರೀ ಭಾಸ್ಕರ ಜ್ಯೊಸರ ಸಭಾಗೃಹದಲ್ಲಿ ಇಡ್ಲಿ, ಚಟ್ನಿ, ಸಾಂಬಾರು, ಬನ್ಸ್ ಹಾಗೂ ಪಾನೀಯಗಳ ‘ನಾಷ್ಟಾ’ ಮುಗಿಸಿದೆವು. ಮುಂದೆ ಗೋಳಿಅಂಗಡಿ-ಹಾಲಾಡಿ ಮಾರ್ಗವಾಗಿ ಶಂಕರ ನಾರಾಯಣ ದೇವಸ್ಥಾನವನ್ನು ಸೇರಿದೆವು. ಸದಸ್ಯರು ದೇವತಾದರ್ಶನ, ದೇವರ ಸೇವೆಗಳನ್ನು ನೆರವೇರಿಸಿ ಸಪ್ತಕ್ಷೇತ್ರಗಳಲ್ಲಿ ಒಂದಾದ ದೇವಾಲಯವನ್ನು ವೀಕ್ಷಿಸಿದರು. ಅಲ್ಲಿನ ಈಶ್ವರ ಲಿಂಗವು ವರ್ಷವಿಡೀ ನೀರಿನಲ್ಲಿ ಮುಳುಗಿರುವುದು ಅಲ್ಲಿನ ವಿಶೇಷ. ಮುಂದಿನ ಗುರಿ ವಾರಾಹಿ ಜಲವಿದ್ಯುತ್ ಕೇಂದ್ರ. ಹೆಬ್ರಿಯಿಂದ ಈ ಕೇಂದ್ರಕ್ಕೆ ಹೋಗುವವರೆಗೂ ಸದಸ್ಯರು ಹಾಡು, ಭಜನೆ, ಅಂತ್ಯಾಕ್ಷರಿ, ಒಗಟುಗಳನ್ನು ಹೇಳಿ ಮನರಂಜನೆ ಪಡೆಯುತ್ತಿದ್ದರು.

ಹೊಸಂಗಡಿಯ ನಂತರ ಹಾದಿ ರಕ್ಷಿತ ಕ್ಷೇತ್ರ (Protected). ಮುಂದೆ ಹೋಗಲು ಅನುಮತಿಯನ್ನು ಅಲ್ಲಿನ ಸ್ಥಳೀಯರಾದ ಶ್ರೀ ಸೂರ್ಯನಾರಾಯಣ ಜ್ಯೊಸ್, ಅಧ್ಯಾಪಕರು, ಚೋನಾಳಿ ಹಾಗೂ ಹವರಾಲ್ ಶ್ರೀ ನೀಲಕಂಠ ರಾಯರು ನಮ್ಮ ಅಪೇಕ್ಷೆಯಂತೆ ಪಡೆದಿದ್ದರು. ವಿದ್ಯುದಾಗಾರಕ್ಕೆ ಹೋಗಿ ಹಿಂದೆ ಬರುವವರೆಗೂ ಇವರು ನಮಗೆ ಮಾರ್ಗದರ್ಶಕರಾಗಿದ್ದರು. ಅವರ ಉಪಕಾರವನ್ನು ಮರೆಯಲು ಸಾಧ್ಯವಿಲ್ಲ.

ವಾರಾಹಿ ವಿದ್ಯುದಾಗಾರದ ಬಾಗಿಲಲ್ಲೇ ‘ಜಲಶಕ್ತಿ ದೇಗುಲ’ ಎಂಬ ಬರಹ ಅನ್ವರ್ಥವಾಗಿದೆ. ಗುಡ್ಡವನ್ನು ಕೊರೆದು ಭೂಗರ್ಭದಲ್ಲಿ 4-5 ಅಂತಸ್ತುಗಳ ವಾಸ್ತುವನ್ನು ರಚಿಸಿರುವುದು ಒಂದು ತಾಂತ್ರಿಕ ಅದ್ಭುತ. ತುಸು ದೂರದ ಅಣೆಕಟ್ಟಿನ ನೀರನ್ನು ಗುಡ್ಡಗಳಲ್ಲಿ ಮಾಡಿದ ಸುರಂಗಗಳ ಮೂಲಕ ಈ ವಾಸ್ತುವಿನೊಳಗೆ ಬರುವಂತೆ ಮಾಡಿದ್ದಾರೆ. ಜಲವಿದ್ಯುತ್ ಕೇಂದ್ರದ ತಳ ಅಂತಸ್ತಿನಲ್ಲಿರುವ ಟರ್ಬೈನ್‌ಗಳಿಗೆ ಅಧಿಕ ಒತ್ತಡದ ಈ ನೀರು ಬಡಿದು ಟರ್ಬೈನ್‌ಗಳು ತಿರುಗುತ್ತವೆ. ಅದರ ಮೇಲಿನ ಅಂತಸ್ತಿನಲ್ಲಿ ಇರುವ ಟರ್ಬೈನ್‌ನ ಜೋಡಣೆಗಳು (Shafts and borings) ಮೇಲಿನ ಮೂರನೇ ಅಂತಸ್ತಿನಲ್ಲಿರುವ ವಿದ್ಯುತ್‌ಜನಕ (Dynamo)ಗಳನ್ನು ತಿರುಗಿಸಿ ವಿದ್ಯುತ್ತನ್ನು ಉತ್ಪಾದಿಸುವಂತೆ ಮಾಡುತ್ತವೆ. ಇವು ಪರಿವರ್ತಕಗಳ ಮೂಲಕ ಹಾದು ಶಿವಮೊಗ್ಗ ಹಾಗೂ ಮಂಗಳೂರಿಗೆ ವಿದ್ಯುತ್ತನ್ನು ಒದಗಿಸುತ್ತವೆ. ಮೇಲಿನ ಅಂತಸ್ತಿನಲ್ಲಿ ಇರುವ ನಿಯಂತ್ರಕ ಕೊಠಡಿ ಹಾಗೂ ದೃಶ್ಯ ಮಾಧ್ಯಮಗಳು ಅಲ್ಲಿ 24 ಗಂಟೆ ಕರ್ತವ್ಯದಲ್ಲಿರುವವರಿಗೆ ವಿದ್ಯುತ್ ಕೇಂದ್ರವನ್ನು ಸುಸ್ಥಿತಿಯಲ್ಲಿರಿಸಲು ಸಹಾಯಕವಾಗುತ್ತವೆ. ಈ ನಾಲ್ಕೈದು ಅಂತಸ್ತುಗಳಲ್ಲಿ ಹತ್ತಿ ಇಳಿದು ಸದಸ್ಯರು ಸುಸ್ತಾದರೂ ಪಡೆದ ಅನುಭವದೆದುರು ಆಯಾಸವು ನಗಣ್ಯ ಎನಿಸಿತು.

ಅನಂತರ ಪಯಣ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನ ಕಮಲ ಶಿಲೆಗೆ. ಇಲ್ಲಿನ ಶ್ರೀದೇವಿಯ ಬಿಂಬವನ್ನು ವರ್ಷಕ್ಕೊಮ್ಮೆ ಯಾದರೂ ನದಿನೀರು ಆವರಿಸಿ ಶ್ರೀಕ್ಷೇತ್ರವನ್ನು ಪಾವನಗೊಳಿಸುತ್ತದೆ. ಶ್ರೀ ಕ್ಷೇತ್ರವು ಎರಡು ಬಡಗುತಿಟ್ಟಿನ ಮೇಳಗಳನ್ನು ನಡೆಸುತ್ತದೆ. ಶ್ರೀ ಕ್ಷೇತ್ರದ ಮಹಿಮೆಯಿಂದ ಆಟದ ಮೇಳಗಳ ಸದಸ್ಯರಿಗೂ ಹರಕೆಯಾಗಿ ಆಟ ಆಡಿಸುವವರಿಗೂ ಕ್ಷೇಮ ಉಂಟಾಗುವುದೆಂದು ಪ್ರತೀತಿ. ದೇವಳದಲ್ಲಿರುವ ಹುತ್ತವು ಸಾಧಾರಣ 8-10 ಅಡಿ ಎತ್ತರಕ್ಕೆ ಬೆಳೆದು ಭವ್ಯವಾಗಿದೆ.

ಸದಸ್ಯರು ಮಧ್ಯಾಹ್ನದ ಪೂಜೆಯನ್ನು ವೀಕ್ಷಿಸಿ, ಸೇವೆಗಳನ್ನು ಕೈಗೊಂಡು ಪ್ರಸಾದ ಭೋಜನವನ್ನು ಸವಿದರು. ಮುಂದಿನ ಹಾದಿಯಲ್ಲಿ ಆಯಾಸ ಆಗದಂತೆ ಶ್ರೀ ಕೆ.ರತ್ನಾಕರ ರಾಯರು ಬಾಳೆಹಣ್ಣನ್ನು ವಿತರಿಸಿದರು.

ಅನಂತರ ಹೋಗಿ ಮುಟ್ಟಿದುದು ಪ್ರಖ್ಯಾತಿ ಹೊಂದಿದ ಗುಡ್ಡಟ್ಟು ಶ್ರೀ ವಿನಾಯಕ ದೇವಸ್ಥಾನಕ್ಕೆ. ದೇವಸ್ಥಾನದ ಹಿಂಭಾಗದಲ್ಲಿ ದೊಡ್ಡದಾದ ಹಾಸುಬಂಡೆ ಇದೆ. ಎದುರಿನ ಗರ್ಭಗುಡಿಯಲ್ಲಿನ ಗಣಪತಿ ವಿಗ್ರಹದ ಹಿಂಭಾಗದಲ್ಲಿ ಮೂಲಗಣಪತಿ ವಿಗ್ರಹ ಇದೆ. ಈ ವಿಗ್ರಹವನ್ನು ದೇವಳದ ದಕ್ಷಿಣ ದಿಕ್ಕಿನಲ್ಲಿರುವ ಕಿಂಡಿಯ ಮೂಲಕ ನೋಡಬಹುದು. ಇಲ್ಲಿ ನಡೆಯುವ ವಿಶೇಷ ಹರಕೆ ಎಂದರೆ ಆಯುರ್ ಕೊಡಸೇವೆ. ಮೂಲವಿಗ್ರಹಕ್ಕೆ ಮುಳುಗುವವರೆಗೆ ಅಭಿಷೇಕ, ಸ್ವಲ್ಪ ಸಮಯದ ನಂತರ ನೀರನ್ನು ಖಾಲಿ ಮಾಡುವುದು. ಹೀಗೆ ದಿನಕ್ಕೆ 2 ಸಲ ಮಾಡಬಹುದು. ಅಲ್ಲಿಗೆ 4 ಸೇವೆಯಾಗುತ್ತದೆ. ಕೆಲವು ದಿನಗಳವರೆಗಿನ ಈ ಸೇವೆ ಈಗಾಗಲೇ ನಿಶ್ಚಯವಾಗಿದೆಯಂತೆ.

ಮುಂದೆ ಹೋದುದು ಸಕ್ಕಟ್ಟು ಎಂಬ ಊರಿಗೆ. ನಮ್ಮ ಪ್ರತಿಷ್ಠಾನದ ಸದಸ್ಯರಾದ, ಕಾರ್ಕಳದಲ್ಲಿ ಲೆಕ್ಕಪರಿಶೋಧಕರಾಗಿ ಕರ್ತವ್ಯ ನಿರ್ವಹಿಸುವ ಶ್ರೀ ವಾಸುದೇವರಾಯರ ಹಿರಿಯರ ಮನೆಗೆ. ಅವರ ಕುಟುಂಬದಲ್ಲಿ ಬಡಗುತಿಟ್ಟಿನ ಬಣ್ಣದ ವೇಷಧಾರಿಗಳಾಗಿ ಸಕ್ಕಟ್ಟು ಲಕ್ಷ್ಮೀನಾರಾಯಣ ರಾಯರು ಪ್ರಸಿದ್ಧಿ ಪಡೆದಿದ್ದರು ಎಂದು ತಿಳಿದೆವು. ಶ್ರೀ ರಘುನಾಥ ರಾಯರು ಈಗ ಕುಟುಂಬದ ಹಿರಿಯರು. ಅವರು ಒದಗಿಸಿದ ತಿಂಡಿ ಹಾಗೂ ಪಾನೀಯಗಳನ್ನು ಸವಿದು ಮುಂದೆ ಹೊರಟೆವು. ಬಾರ್ಕೂರುನಿಂದ ಬ್ರಹ್ಮಾವರಕ್ಕಾಗಿ ಮಲ್ಪೆಯ ಸಮುದ್ರ ತೀರವನ್ನು ಸೇರಿದೆವು. ಅಲ್ಲಿ ಮರಳಿನಲ್ಲಿ ಆಟವಾಡಿ, ಸೂರ್ಯಾಸ್ತಮವನ್ನು ನೋಡಿ ಹಿಂದಿರುಗಿದೆವು. ಹಾದಿಯಲ್ಲಿ ಶ್ರೀ ಸೌಮ್ಯ ಭವಾನಿಶಂಕರ ದಂಪತಿಗಳು ಹಂಚಿದ ಚಪಾತಿ, ಸಾಗುಗಳನ್ನು ಸವಿದು ಕಾರ್ಕಳ ಸೇರಿಕೊಂಡೆವು.

ಶಂಕರ ಪ್ರತಿಷ್ಠಾನದ ಅಧ್ಯಕ್ಷರು ಪ್ರವಾಸಕ್ಕೆ ಬಂದ ಎಲ್ಲ ಸದಸ್ಯರಿಗೆ ಹಾಗೂ ಪ್ರವಾಸದ ಇತರ ಕಾರ್ಯಕ್ರಮಗಳಲ್ಲಿ ನೆರವಿತ್ತವರಿಗೆ ಧನ್ಯವಾದವಿತ್ತರು.

ವರದಿ : **ರಾ.ರಾ.ಅತ್ತೂರು**

# ಬ್ರಹ್ಮಕಲಶದ ಸಂಭ್ರಮದಲ್ಲಿ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ

ಪುತ್ತೂರಿನಿಂದ ಉಪ್ಪಿನಂಗಡಿ ಮಾರ್ಗದಲ್ಲಿ ಅಂದಾಜು ಐದಾರು ಕಿಲೋ ಮೀಟರ್ ದೂರದಲ್ಲಿರುವ ದೇವಸ್ಥಾನ ಮಠಂತಬೆಟ್ಟು ಶ್ರೀ ರಾಜ ರಾಜೇಶ್ವರಿ ದೇವಸ್ಥಾನ. ಸ್ಥಾನಿಕ ಬ್ರಾಹ್ಮಣ ಸಮಾಜದ ದೇವಸ್ಥಾನಗಳಲ್ಲಿ ಇದೂ ಒಂದು. ಅರ್ಚಕರು ಮತ್ತು ಆಡಳಿತದಾರರು ಸ್ಥಾನಿಕ ಬ್ರಾಹ್ಮಣರೇ ಆಗಿದ್ದಾರೆ. ನಾದುರಸ್ಥಿಯಲ್ಲಿದ್ದ ಈ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಲು ಕೈ ಹಾಕಿ ಈಗಾಗಲೇ ಸುಮಾರು 75% ಕೆಲಸ ಕಾರ್ಯ ಪೂರೈಸಲಾಗಿದೆ.

ಬರುವ ಜನವರಿ (2016)ಯಲ್ಲಿ ಬ್ರಹ್ಮಕಲಶ ನೆರವೇರಿಸುವುದಾಗಿ ನಿರ್ಣಯಿಸಲಾಗಿದ್ದು, ಅದು ಬ್ರಹ್ಮಶ್ರೀ ವೇದ ಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಂರಕ್ಷಕರಾದ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳ ಅನುಗ್ರಹದೊಂದಿಗೆ ನಡೆಯಲಿದೆ. ಈ ಬಗ್ಗೆ ದಿನಾಂಕ 20-09-2015ರಂದು ಮಠಂತಬೆಟ್ಟುವಿನಲ್ಲಿ ಸಮಾಜ ಬಾಂಧವರ ಮತ್ತು ಊರವರ ಸಹಭಾಗಿತ್ವದಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯನ್ನು ರಚಿಸಲಾಯಿತು.

ಗೌರವಾಧ್ಯಕ್ಷರಾಗಿ ತಾಲೂಕು ಪಂಚಾಯತು ಮಾಜಿ ಅಧ್ಯಕ್ಷ ಶ್ರೀ ಕೆ. ಜಯಾನಂದ, ಅಧ್ಯಕ್ಷರಾಗಿ ನೋಟರಿ ಹಾಗೂ ವಕೀಲ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮಾಜಿ ಅಧ್ಯಕ್ಷ, ರಾಜ್ಯ ಮಟ್ಟದ ಧಾರ್ಮಿಕ ದತ್ತಿ ಇಲಾಖೆಯ ಸಮಿತಿಯ ಸದಸ್ಯ ಶ್ರೀ ಎನ್.ಕೆ. ಜಗನ್ನಿವಾಸ ರಾವ್, ಪ್ರಧಾನ ಕಾರ್ಯದರ್ಶಿಯಾಗಿ ದೇವಳದ ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಅರ್ಚಕರಾದ ಶ್ರೀ ಯಂ. ನಾಗೇಶ ಶರ್ಮ ಆಯ್ಕೆಯಾಗಿರುತ್ತಾರೆ. ಕೋಶಾಧಿಕಾರಿಯಾಗಿ ಶ್ರೀ ಯಂ ನರೇಂದ್ರ ಮತ್ತು ಶ್ರೀ ಎಸ್.ಸದಾನಂದ ರಾವ್ ಆಯ್ಕೆಯಾಗಿರುತ್ತಾರೆ. ಅಲ್ಲದೆ ಹಲವಾರು ಉಪಸಮಿತಿಗಳನ್ನು ರಚಿಸಲಾಗಿದೆ. ಮುಖ್ಯ ಸಂಚಾಲಕರಾಗಿ ಶ್ರೀ ಬೆಳ್ಳೆ ಕರುಣ್ ರಾವ್ ಆಯ್ಕೆಯಾಗಿದ್ದು ಸಮಾಜದ ಹಾಗೂ ಊರವರನ್ನು ಒಳಗೊಂಡ ಸಮಿತಿ ರಚಿಸಲಾಯಿತು.

ವರದಿ : **ಕೆ.ಗೋಪಾಲಕೃಷ್ಣ,ಕಡಬ**

# ವೈವಾಹಿಕ ಬೆಳ್ಳಿ ಹಬ್ಬದ ಆಚರಣೆ

ಕುಂಜಾರುಗಿರಿ ಪಡುಬೆಳ್ಳೆಯ ದಿ। ದೇವರಾವ್‌ರವರ ಪುತ್ರ ಶ್ರೀ ಬಿ. ಶ್ರೀಪತಿ ರಾವ್ ಹಾಗೂ ಶ್ರೀಮತಿ ಪ್ರಭಾ ದಂಪತಿಗಳು ವೈವಾಹಿಕ ಬೆಳ್ಳಿ ಹಬ್ಬದ ಸಲುವಾಗಿ ದಿನಾಂಕ.29-09-2015ರಂದು ಪಡುಬೆಳ್ಳೆಯ ಸ್ವಗೃಹ ಶ್ರೀದೇವಿ ನಿಲಯದಲ್ಲಿ ಶ್ರೀ ಲಕ್ಷ್ಮೀನಾರಾಯಣ ಹೃದಯ ಹವನ ದೊಂದಿಗೆ ಬಂಧು ಬಾಂಧವರೊಡಗೂಡಿ ಸಂಭ್ರಮದಿಂದ ಆಚರಿಸಿದರು. ಅಂದು ಸಾಂಸ್ಕೃತಿಕ ಕಾರ್ಯಕ್ರಮವಾಗಿ ಕು। ಸಾಗರಿಕಾ (ಶ್ರೀ ಪಡುಬೆಳ್ಳೆ ಸದಾಶಿವ ರಾಯರ ಪುತ್ರಿ)ಳಿಂದ ಶಾಸ್ತ್ರಿಯ ಸಂಗೀತ, ಕು। ರಾಜೇಶ್ವರಿ (ಶ್ರೀ ಪಡುಬೆಳ್ಳೆ ರಾಘವೇಂದ್ರ ರಾಯರ ಪುತ್ರಿ)ಯಿಂದ ಭರತನಾಟ್ಯ ಮತ್ತು ಮಾ। ರವಿತೇಜ್ (ಪಡುಬೆಳ್ಳೆ ಡಾ। ರಮೇಶ್ ರಾಯರ ಪುತ್ರ)ರಿಂದ ಕೊಳಲು ವಾದನ ಕಛೇರಿಯೂ ನೆರವೇರಿತು.

# ಪ್ರಶಸ್ತಿ ಪ್ರದಾನ

ಬಣ್ಣದ ಸಕ್ಕಟ್ಟು ಶ್ರೀ ಲಕ್ಷ್ಮೀನಾರಾಯಣಯ್ಯ ಪ್ರತಿಷ್ಠಾನ (ರಿ.) ಇದರ ವತಿಯಿಂದ ತಾ.01-11-2015ರಂದು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಸೌಕೂರು ಇಲ್ಲಿ ದುರ್ಗಾ ಹೋಮ, ಬಣ್ಣದ ಸಕ್ಕಟ್ಟು ಪ್ರಶಸ್ತಿ ಪ್ರದಾನ ಹಾಗೂ ರಾಜಋಷಿ ರವೀಂದ್ರ ಪ್ರಶಸ್ತಿ ಪ್ರದಾನ ನಡೆಯಿತು. ಅದರೊಂದಿಗೆ ಪಂಚ ಬಣ್ಣದ ವೇಷಗಳ ಒಡ್ಡೋಲಗ ಹಾಗೂ ಕನಕಾಂಗಿ ಕಲ್ಯಾಣ ಯಕ್ಷಗಾನ ಪ್ರದರ್ಶನ ಜರಗಿತು. ಮುದ್ದಣ ಅಧ್ಯಯನ ಕೇಂದ್ರದ ಗೌರವಾಧ್ಯಕ್ಷರಾದ ಶ್ರೀ ನಂದಳಿಕೆ ಬಾಲಚಂದ್ರರಾವ್ ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿದ್ದರು.

**ಶ್ರೀ ಮಾತಾ ಜ್ಯೋತಿಷ್ಯಾಲಯ**
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.
ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.
**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**Buying and selling shares as easy as checking your emails**
**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


**ಎಮ್. ದೇವಾನಂದ್ ಭಟ್** Cell : 9845644556, 9483913344
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಶುಭ ವಿವಾಹ

ಹೊಸತೋಟ ಶ್ರೀಮತಿ ಮತ್ತು ಶ್ರೀ ರಾಮಚಂದ್ರ ರಾಯರ ಪುತ್ರ **ಸುಧಾಕರ** ಹಾಗೂ ಪಾದೆಬೆಟ್ಟು ಶ್ರೀಮತಿ ಮತ್ತು ಶ್ರೀ ದೇವರಾಯ ಶಾಸ್ತ್ರಿಯವರ ಪುತ್ರಿ **ಅಕ್ಷತಾಳ** ಶುಭ ವಿವಾಹವು ದಿನಾಂಕ 26-10-2015ರಂದು ಮೂಲ್ಕಿ ಬಪ್ಪನಾಡು ಜ್ಞಾನಮಂದಿರದಲ್ಲಿ ಜರಗಿತು.

**** ****

ಶ್ರೀ ವೈ. ವಿ. ವಾಸುದೇವರಾವ್ ಹಾಗೂ ಶ್ರೀಮತಿ ರಾಜೇಶ್ವರಿಯವರ ಪುತ್ರಿ **ರಕ್ಷಾ** ಹಾಗೂ ಶ್ರೀ ಚಂದ್ರಶೇಖರ ಐತಾಳ ಹಾಗೂ ಶ್ರೀಮತಿ ವೇದಾವತಿಯವರ ಪುತ್ರ **ಜೈದೀಪ** ಇವರ ಶುಭ ವಿವಾಹವು ದಿನಾಂಕ 26-10-2015ರಂದು ಶೇಷಶಯನ ಮಂಟಪ, ಉಡುಪಿಯಲ್ಲಿ ಜರಗಿತು.

**** ****

ಬಾರ್ಕೂರಿನ ಶ್ರೀಮತಿ ಹಾಗೂ ಶ್ರೀ ಮಂಜುನಾಥ ರಾಯರ ಪುತ್ರ **ಭರತ** ಹಾಗೂ ಎಲ್ಲೂರು ಶ್ರೀಮತಿ ಹಾಗೂ ಶ್ರೀ ಪ್ರಭಾಕರ ಶ್ರೀನಿವಾಸ ಶ್ಯಾನುಭೋಗರ ಪುತ್ರಿ **ರೂಪಾಲಿ**ಯ ಶುಭ ವಿವಾಹವು ದಿನಾಂಕ 30-10-2015ರಂದು ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ಜರಗಿತು.

**** ****

ಶ್ರೀಮತಿ ಪ್ರಮೀಳ ಮತ್ತು ಶ್ರೀ ಕೆ. ಗಣೇಶ ರಾವ್‌ರ ಪುತ್ರಿ **ಪ್ರತಿಮಾ** ಹಾಗೂ ಶ್ರೀಮತಿ ನಳಿನಿ ಹಾಗೂ ಶ್ರೀ ಕೆ. ಗೋಪಾಲಕೃಷ್ಣ ರಾವ್‌ರ ಪುತ್ರ **ಸುಬ್ರಹ್ಮಣ್ಯ ಪ್ರಸಾದ್**ರ ಶುಭವಿವಾಹವು ದಿನಾಂಕ 25-10-2015ರಂದು ಚಿಟ್ಪಾಡಿ ಶ್ರೀಶಾರದಾಂಬಾ ದೇವಸ್ಥಾನದ ಸಭಾಭವನದಲ್ಲಿ ಜರಗಿತು.

**** ****

ಕಬ್ಬಿನಾಲೆ ಶ್ರೀ ರಂಗಯ್ಯ ಹೆಬ್ಬಾರ್ ಮತ್ತು ಸುಂದರಿಯಮ್ಮರವರ ದ್ವಿತೀಯ ಪುತ್ರ **ಪ್ರಕಾಶ್ ಹೆಬ್ಬಾರ್** ಹಾಗೂ ದಿ| ಲಕ್ಷ್ಮೀನಾರಾಯಣ ರಾವ್ ಹಾಗೂ ವಾರಿಜಾ ಬಿ.ರಾವ್, ಬೊಳ್ವಾರವರ ಪುತ್ರಿ **ಆಶಾ**ರವರ ಶುಭವಿವಾಹವು ದಿನಾಂಕ 05-11-2015ರಂದು ಮಂಗಳಾದೇವಿ ದೇವಸ್ಥಾನ, ಮಂಗಳೂರಿನಲ್ಲಿ ಜರಗಿತು.

**** ****

ಸುರತ್ಕಲ್ ಹೊಸಬೆಟ್ಟುವಿನಲ್ಲಿರುವ ಕಾಪು ಶ್ರೀ ಮಾಧವರಾವ್ ಮತ್ತು ಶ್ರೀಮತಿ ಕುಸುಮರವರ ಪುತ್ರ **ಶ್ರೀ ರಘುವೀರ**ನ ವಿವಾಹವು ಪೊಳಲಿ ನಟ್ಟೋಜಿ ಶ್ರೀ ನಾಗೇಶ ರಾವ್ ಮತ್ತು ಶ್ರೀಮತಿ ಪದ್ಮಲತಾರವರ ಪುತ್ರಿ **ಕು ಅಂಜಲಿ**ಯೊಂದಿಗೆ ದಿನಾಂಕ 23-10-2015ರಂದು ಬಂಟ್ವಾಳ "ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪ"ದಲ್ಲಿ ನೆರವೇರಿತು. ದಿನಾಂಕ 24-10-2015ರಂದು ಹೊಸಬೆಟ್ಟು "ನವಗಿರಿ ಕಲ್ಯಾಣ ಮಂಟಪ"ದಲ್ಲಿ "ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಶ್ರೀ ಜಗದೀಶ ಶಿವಪುರ ಇವರ ಸಂಗೀತ ಕಾರ್ಯಕ್ರಮದೊಂದಿಗೆ ಔತಣಕೂಟವು ವಿಜೃಂಭಣೆಯಿಂದ ನೆರವೇರಿತು.

## ಗೃಹಪ್ರವೇಶ

ಶ್ರೀಮತಿ ವಸುಂಧರ ಹಾಗೂ ಶ್ರೀ ಕೆ.ಎಸ್.ರವೀಂದ್ರ ರಾವ್ ಇವರು ತೀರ್ಥಹಳ್ಳಿ, ಮುಳಬಾಗಿಲಿನಲ್ಲಿ ನಿರ್ಮಿಸಿರುವ ನೂತನ ಗೃಹದ ಪ್ರವೇಶೋತ್ಸವವನ್ನು ತಾ.23-10-2015ರಂದು ನೆರವೇರಿಸಿದರು.

## ಶುಭ ಜನನ

ಶ್ರೀಮತಿ ಸುಮನ ಹಾಗೂ ಡಾ| ಎ.ಪಿ.ಕೃಷ್ಣ(ಉಪಾಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು) ಇವರ ಪುತ್ರಿ ಶ್ರೀಮತಿ ಅಂಕಿತಾ ಹಾಗೂ ಶ್ರೀ ಸಂತೋಷ ದಂಪತಿಗಳಿಗೆ ತಾ.14-10-2015ರಂದು ಗಂಡು ಮಗು ಜನಿಸಿರುತ್ತದೆ. ಅಮೇರಿಕಾದಲ್ಲಿ ವಾಸ್ತವ್ಯದಲ್ಲಿರುವ ದಂಪತಿಗಳು ಮಗುವಿಗೆ ಆರ್ಧ್ವಿತ್ ಎಂದು ನಾಮಕರಣ ಮಾಡಿರುತ್ತಾರೆ.

## ನಿಧನ

### ಎಲ್ಲೂರು ಸರ್ವೋತ್ತಮ ರಾಯರು

ದಿ| ಎಲ್ಲೂರು ರಾಮಚಂದ್ರರಾಯರ ಪುತ್ರ ಎಲ್ಲೂರು ಸರ್ವೋತ್ತಮ ರಾಯರು ತಾ.06-10-2015ರಂದು ನಿಧನರಾಗಿರುತ್ತಾರೆ. ಅವರು ಪತ್ನಿ ಮಕ್ಕಳು ಮೊಮ್ಮಕ್ಕಳು ಹಾಗೂ ಬಂಧುಮಿತ್ರರನ್ನು ಅಗಲಿರುತ್ತಾರೆ.

### ಎಲ್ಲೂರು ಕೃಷ್ಣರಾಯರು

ದಿ| ಎಲ್ಲೂರು ರಾಮಚಂದ್ರರಾಯರ ಪುತ್ರ ಎಲ್ಲೂರು ಕೃಷ್ಣರಾಯರು ತಾ.30-10-2015ರಂದು ನಿಧನರಾಗಿರುತ್ತಾರೆ. ಅವರು ಪತ್ನಿ ಮಕ್ಕಳು ಮೊಮ್ಮಕ್ಕಳು ಹಾಗೂ ಬಂಧುಮಿತ್ರರನ್ನು ಅಗಲಿರುತ್ತಾರೆ.

### ಶ್ರೀಮತಿ ರತ್ನಮ್ಮ

ಬೈಂದೂರಿನ ಶ್ರೀ ಪಿ.ಶೇಷಪ್ಪಯ್ಯರವರ ತಾಯಿ ಶ್ರೀಮತಿ ರತ್ನಮ್ಮ ನವರು ತಾ.07-10-2015ರಂದು ನಿಧನರಾಗಿರುತ್ತಾರೆ. ಇವರಿಗೆ ತೊಂಬತ್ತಮೂರು ವರ್ಷ ಪ್ರಾಯವಾಗಿತ್ತು.

## ವಿದೇಶ ಪ್ರಯಾಣ

ಮುಂಬಯಿ ರಿಸರ್ವ್ ಬ್ಯಾಂಕಿನ ಎ.ಜಿ.ಎಂ ಆದ ಉಬರಳೆ ಸಂತೋಷ್ ಕುಮಾರ್‌ರವರು ವರ್ಲ್ಡ್ ಪೇಮೆಂಟ್ ಸಿಸ್ಟಮ್ ರೆಗ್ಯುಲೇಶನ್ ಬ್ಯಾಂಕ್ ಫಾರ್ ಇಂಟರ್‌ನ್ಯಾಶನಲ್ ಸೆಟಲ್‌ಮೆಂಟ್‌ನಲ್ಲಿ ಕಾರ್ಯನಿರ್ವಹಿಸಲು ಆರ್.ಬಿ.ಐ.ನ ವತಿಯಿಂದ ಸ್ವಿಜರ್ಲೆಂಡಿನ ಬೆಸಿಲ್‌ಗೆ ತಾ.30-10-2015ರಂದು ತೆರಳಿರುತ್ತಾರೆ. ಇವರು ನಮ್ಮ ಸಂಘದ ನಿರ್ದೇಶಕರಲ್ಲೊಬ್ಬರಾದ ಶ್ರೀಮತಿ ಉಷಾ ಶ್ಯಾನುಭಾಗ್‌ರ ಅಳಿಯ. ಇವರಿಗೆ ಶ್ರೀಶಾರದಾ ಬಳಗದ ಶುಭ ಹಾರೈಕೆಗಳು

## ಬಂಧನ

ಮಳೆಯ ಹನಿಗಳಲ್ಲಿ
ಬೆರೆತಿದೆ ನನ್ನ ನಿನ್ನ ಬಂಧನ
ಸಿಹಿಯ ಸಕ್ಕರೆಯಲ್ಲಿ
ಕೂಡಿದೆ ನನ್ನ ನಿನ್ನ ಬಂಧನ
ಕಾಮನ ಬಿಲ್ಲಿನಲ್ಲಿ
ಹಬ್ಬಿದೆ ನನ್ನ ನಿನ್ನ ಬಂಧನ
ಶಾಂತಿ ಸಾಗರದಲ್ಲಿ
ಮುಳುಗಿಸಿದೆ ನನ್ನ ನಿನ್ನ ಬಂಧನ
ಸ್ವಾತಿ ಮುತ್ತಿನಲ್ಲಿ
ನೋಡಿದೆ ನನ್ನ ನಿನ್ನ ಬಂಧನ
ಅಳಿಲಿನ ಸೇವೆಯಲ್ಲಿ
ತಿಳಿದೆ ನನ್ನ ನಿನ್ನ ಬಂಧನ
ಬೆಂದ ಹೃದಯದಲ್ಲಿ
ಬೆರೆತಿದೆ ನನ್ನ ನಿನ್ನ ಬಂಧನ
ಒಂದೊಂದು ಮಾತಿನಲ್ಲಿ
ತಿಳಿಸಿದೆ ನನ್ನ ನಿನ್ನ ಬಂಧನ
ಅನಂತದ ಬಿಂದುವಿನಲ್ಲಿ
ಕೇಳಿಸಿದೆ ನನ್ನ ನಿನ್ನ ಬಂಧನ
ಸ್ನೇಹದ ಮಡಿಲಲ್ಲಿ
ಸಾಗಿದೆ ನನ್ನ ನಿನ್ನ ಬಂಧನ
ಕವಿಯ ಪ್ರೀತಿಯಲ್ಲಿ
ಅರಳಿದೆ ನನ್ನ ನಿನ್ನ ಬಂಧನ

-ಕ.ಸು.ಶ್ರೀ

## ಶ್ರೀಶಾರದಾ ತುರ್ತು ಸೇವಾ ಸಮಿತಿ

**ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.**

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | – | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | – | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | – | 9343572490 |
| 4. | ನಂದಳಿಕೆ ಉಮೇಶ್ ರಾವ್ | – | 8970504176 |
| 5. | ಹೆರ್ಗ ನಿರಂಜನ ರಾವ್ | – | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | – | 9448252736 |
| 7. | ಮಹೇಶ್ | – | 7259914498 |
| 8. | ಟಿ.ಜಗದೀಶ ರಾವ್ | – | 9686123905 |
| 9. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | – | 9945379479 |
| 10. | ಅಜಿತ್ ರಾವ್ ಬೈಲೂರು | – | 9448108920 |
| 11. | ಆದ್ಯಪಾಡಿ ಮೋಹನದೇವ್ | – | 0820-2535328 |
| 12. | ವೈ. ಭುವನೇಂದ್ರ ರಾವ್ | – | 9448428330 |
| 13. | ಡಾ| ವೈ. ಸುದರ್ಶನ್ ರಾವ್ | – | 9845136322 |
| 14. | ಕುತ್ಪಾಡಿ ಸುರೇಶ್ ರಾವ್ | – | 9483242111 |
| 15. | ವೈ. ಪ್ರಕಾಶ್ ಕುಮಾರ್ | – | 9448445617 |
| 16. | ವೈ. ಪ್ರಸಾದ್ ಕುಮಾರ್ | – | 9036252105 |
| 17. | ಪರೀಕ ಚಂದ್ರಶೇಖರ ರಾವ್ | – | 9591893091 |
| 18. | ಬಿ. ಜಯರಾಮ ರಾವ್ | – | 9844545040 |
| 19. | ಎಮ್.ಪಾಲಚಂದ್ರ ರಾವ್ | – | 0820-2521366 |
| 20. | ಕೆ. ವೆಂಕಟ್ ರಾವ್ | – | 9480016125 |
| 21. | ಎಸ್.ಎಮ್.ರಾವ್ | – | 9449914040 |
| 22. | ಐ.ಕೆ.ಜಯಚಂದ್ರ ರಾವ್ | – | 9448331683 |

## ಐಂದ್ರೀ ಶಾಂತಿ ಹಾಗೂ ಶ್ರೀ ಧನ್ವಂತರಿ ಹವನ

ಉಡುಪಿ ಚಿಟ್ಪಾಡಿಯ ಕಸ್ತೂರ್ಬಾ ನಗರದಲ್ಲಿ ವಾಸವಾಗಿರುವ ನಿವೃತ್ತ ಶಿಕ್ಷಕ ಹಾಗೂ ಪ್ರಗತಿಪರ ಕೃಷಿಕ ಶ್ರೀ ಇನ್ನಾ ರಾಜಗೋಪಾಲ ರಾಯರು ತಮ್ಮ ಪತ್ನಿ ಶ್ರೀಮತಿ ಜಯಲಕ್ಷ್ಮೀ ಹಾಗೂ ಮಕ್ಕಳು ಹಾಗೂ ಕುಟುಂಬಸ್ಥರೊಂದಿಗೆ ತಮ್ಮ 75ನೇ ಹುಟ್ಟು ಹಬ್ಬದ ಪ್ರಯುಕ್ತ ಉಡುಪಿ ಕುಂಜಿಬೆಟ್ಟಿನ ಜ್ಞಾನಮಂದಿರದಲ್ಲಿ ತಾ.09-11-2015ರಂದು ಐಂದ್ರೀ ಶಾಂತಿ ಹಾಗೂ ಶ್ರೀ ಧನ್ವಂತರಿ ಹವನವನ್ನು ನೆರವೇರಿಸಿದರು. ಇವರಿಗೆ ಶ್ರೀಶಾರದಾ ಬಳಗದ ಶುಭಾಶಯಗಳು.

## ಸಹಸ್ರಚಂದ್ರದರ್ಶನ ಶಾಂತಿ

ಮೂಡುಬೆಳ್ಳೆಯಲ್ಲಿ ವಾಸವಾಗಿರುವ ನಿವೃತ್ತ ಶಿಕ್ಷಕ ಹಾಗೂ ಪ್ರಗತಿಪರ ಕೃಷಿಕ ಶ್ರೀ ಬೆಳ್ಳೆ ಸದಾನಂದ ರಾಯರು ತಮಗೆ 80ನೇ ವರ್ಷ ಪ್ರಾಪ್ತಿಯ ಸಂದರ್ಭದಲ್ಲಿ ತಮ್ಮ ಪತ್ನಿ ಶ್ರೀಮತಿ ಶಾರದಾ ಹಾಗೂ ಮಕ್ಕಳು, ಕುಟುಂಬದವರೊಡಗೂಡಿ ತಾ.25-10-2015ರಂದು ತಮ್ಮ ಮೂಡುಬೆಳ್ಳೆಯ ಸ್ವಗೃಹ 'ದಾಸಕೃಪಾ'ದಲ್ಲಿ ಸಹಸ್ರಚಂದ್ರದರ್ಶನ ಶಾಂತಿಯನ್ನು ನೆರವೇರಿಸಿದರು. ಅಪಾರ ಅಭಿಮಾನಿಗಳು, ಬಂಧು ಬಾಂಧವರು, ಶಿಷ್ಯರು ಸಮಾರಂಭಕ್ಕೆ ಹಾಜರಾಗಿ ಶುಭಹಾರೈಸಿದರು. ಇವರಿಗೆ ಶ್ರೀಶಾರದಾ ಬಳಗದ ಶುಭಾಶಯಗಳು.

## ಶ್ರೀಶಾರದಾ ವೇದಿಕೆ - ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.**
**ಇ-ಮೇಯ್ಲ್ : srisharadaudupi@gmail.com ಹಾಗೂ sudarshany@rediffmail.com**
**ವೆಬ್‌ಸೈಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**
**ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920**

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

| | | |
|---|---|---|
| ಆಜೀವಸದಸ್ಯರು | : | ರೂ.500/- |
| ದಾನಿಗಳು | : | ರೂ.1000/- |
| ಪೋಷಕರು | : | ರೂ.5000/- |
| ಮಹಾಪೋಷಕರು | : | ರೂ.10000/- |

### ಜಾಹೀರಾತುದರ

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ | | |
| ಜಾಹೀರಾತು ಒಂದುಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ | | |
| ಜಾಹೀರಾತು ಒಂದು ಬಾರಿಗೆ | : | ರೂ.300/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1200/- |


ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್‌ಸ್ಟ್ರೀಟ್ ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 01092200002928 at Syndicate Bank Carstreet Branch, Udupi IFSC Code SYNB0000186

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಶ್ರೀ ಶಾರದಾ ಪತ್ರಿಕೆಯ ಪೋಷಕರಾಗಿ ಸುದರ್ಶನ್ ಹಾಗೂ ಸುಹಾಸ್



ಶ್ರೀ ಸುದರ್ಶನ್ ಎಂ.ಆರ್.



ಶ್ರೀ ಸುಹಾಸ್ ಎಂ.ಆರ್.

ಇವರು ಮೂಲತಃ ಮೂಡುಗೆರೆಯ ಪ್ರಸ್ತುತ ಕುತ್ಪಾಡಿಯಲ್ಲಿ ವಾಸವಾಗಿರುವ ಭಾರತೀಯ ಸೇನೆಯ ನಿವೃತ್ತ ಶ್ರೀ ರಾಜಗೋಪಾಲ ರಾವ್ ಹಾಗೂ ಶ್ರೀಮತಿ ಪ್ರಸನ್ನಕುಮಾರ್ ರಾವ್‌ರವರ ಪುತ್ರರು. ಶ್ರೀ ಸುಹಾಸ್‌ರವರು ನೇಶನಲ್ ಡಿಫೆನ್ಸ್ ಅಕಾಡಮಿ ಪುಣೆಯಲ್ಲಿ ಬಿ.ಎಸ್ಸಿ ಪದವಿಗಳಿಸಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಸುದರ್ಶನ್‌ರವರು ಬೆಂಗಳೂರಿನ ಅಂಬೇಡ್ಕರ್ ತಾಂತ್ರಿಕ ವಿದ್ಯಾಲಯದಿಂದ ಬಿ.ಇ ಪದವಿ ಪಡೆದು ಭಾರತೀಯ ನೌಕಾದಳದಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಶ್ರೀಶಾರದಾ ವೇದಿಕೆಗೆ ಪೋಷಕರಾದ ಸುಸಂದರ್ಭದಲ್ಲಿ ನಮ್ಮ ಸಮಾಜದ ಈ ಈರ್ವ ಧೀರ ಪುತ್ರರಿಗೆ ಶಾರದಾ ಪತ್ರಿಕೆಯು ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಕುಂಜಿಬೆಟ್ಟಿನ ಶ್ರೀ ಶಾರದೆಗೆ ನವರಾತ್ರಿಯ ವಿಶೇಷ ಸೇವಾರ್ಥಿಗಳು

### ಶ್ರೀ ದೇವಿಗೆ ಬಂಗಾರದ ಕಿವಿಯೋಲೆಗಳ ಸಮರ್ಪಣೆ



ನಮ್ಮ ಸಂಘದ ಕೋಶಾಧಿಕಾರಿಗಳಾದ ಶ್ರೀ ಕೆ.ಸುಧಾಕರ ರಾವ್ ಹಾಗೂ ಶ್ರೀಮತಿ ಜ್ಯೋತಿ ಸುಧಾಕರ್ ರಾವ್ ದಂಪತಿಗಳು ನವರಾತ್ರಿಯಂದು ಶ್ರೀಶಾರದೆಗೆ ಸುಮಾರು ಮೂವತ್ತು ಸಾವಿರ ರೂಪಾಯಿ ಮೌಲ್ಯದ ಬಂಗಾರದ ಎರಡು ಕಿವಿಯೋಲೆಗಳನ್ನು ಸಮರ್ಪಿಸಿದರು. ಶ್ರೀ ಸುಧಾಕರ ರಾಯರು ಕಾಪುವಿನ ಶ್ರೀ ಮೋಹನ್ ರಾವ್ ಹಾಗೂ ಶ್ರೀಮತಿ ರಮಾ ದಂಪತಿಗಳ ಪುತ್ರ. ಬಿ ಎಸ್ಸಿ ಹಾಗೂ ಕಾನೂನು ಪದವೀಧರರು ಹಾಗೂ ಇಂಡಿಯನ್ ಇನ್ಶ್ಯೂರೆನ್ಸ್ ಇನ್ಸ್ಟಿಟ್ಯೂಟ್‌ನಿಂದ ಡಿಪ್ಲೊಮಾ ಪದವಿ ಪಡೆದಿದ್ದಾರೆ. ಎಲ್.ಐ.ಸಿ. ಯಲ್ಲಿ ಡಿವಿಶನಲ್ ಮೆನೆಜರ್ ಹುದ್ದೆಯಿಂದ ನಿವೃತ್ತರು. ಇವರ ಪತ್ನಿ ಶ್ರೀಮತಿ ಜ್ಯೋತಿ ರಾವ್‌ರವರು ಶ್ರೀ ಪರೀಕ ದೇವರಾವ್ ಹಾಗೂ ಶ್ರೀಮತಿ ಇಂದಿರಾರವರ ಪುತ್ರಿ. ಮಗ ಶ್ರೀ ಸಂಜಯ್, ಇಂಜಿನಿಯರ್ ಆಗಿ ಅಮೇರಿಕಾದಲ್ಲಿ ನೆಲೆಸಿದ್ದು ಮಗಳು ಶ್ರೀಮತಿ ಸೀಮಾ ಜಯಂತ್ ರಾಜ್ ಎಂ.ಸಿ.ಎ ಪದವೀಧರೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಒಟ್ಟು ಮೂರು ಮೊಮ್ಮಕ್ಕಳೊಂದಿಗೆ ಶ್ರೀ ಶಾರದಾ ದೇವಸ್ಥಾನದ ಬಳಿಯೇ ಸ್ವಂತ ನಿವಾಸದಲ್ಲಿ ಸಂತೃಪ್ತ ಜೀವನ ನಡೆಸುತ್ತಿರುವ ಶ್ರೀ ಸುಧಾಕರ ರಾವ್ ದಂಪತಿಗಳಿಗೆ ಶ್ರೀ ಶಾರದೆಯ ರಕ್ಷೆ ಸದಾ ಇರಲಿ ಎಂದು ಆಡಳಿತ ಮಂಡಳಿ ಹಾರೈಸುತ್ತದೆ.

### ಜ್ಞಾನಮಂದಿರದ ಮೆಟ್ಟಿಲುಗಳಿಗೆ ಸ್ಟೀಲ್ ಗ್ರಿಲ್ ನ ಕೊಡುಗೆ

ಹಿಂದೆ ಬೆಂಗಳೂರಿನಲ್ಲಿ ವಾಸವಾಗಿದ್ದು ಈಗ ಕುಂಜಿಬೆಟ್ಟಿನಲ್ಲಿ ನೆಲೆಸಿರುವ ಶ್ರೀ ಎಂ.ಕೃಷ್ಣಮೂರ್ತಿ ರಾವ್ ಹಾಗೂ ಶ್ರೀಮತಿ ಭವಾನಿ ದಂಪತಿಗಳು ಶಾರದಾ ದೇವಸ್ಥಾನದ ಬಳಿ ಭಕ್ತಾದಿಗಳಿಗೆ ಹೋಮ ಹವನ, ದುರ್ಗಾ ನಮಸ್ಕಾರ, ಪಿತೃ ಶ್ರಾದ್ಧ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆಂದು ನಿರ್ಮಿಸಿರುವ ಜ್ಞಾನಮಂದಿರದ ಮೆಟ್ಟಿಲುಗಳನ್ನು ವೃದ್ಧರು ಹತ್ತಲು ಕಷ್ಟಪಡುವುದನ್ನು ಮನಗಂಡು ಸ್ವಯಂಸ್ಫೂರ್ತಿಯಿಂದ ಆಡಳಿತಮಂಡಳಿಯನ್ನು ಸಂಪರ್ಕಿಸಿ ಮೆಟ್ಟಿಲುಗಳಿಗೆ ಸುಮಾರು ಹತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಸುಂದರವಾದ ಸ್ಟೀಲ್ ಗ್ರಿಲ್ ಅಳವಡಿಸಿದ್ದಾರೆ. ಇವರು ಮಸ್ಕೆಬೈಲಿನ ದಿ। ಸುಬ್ಬಣ್ಣಯ್ಯ ಮತ್ತು ರತ್ನಮ್ಮ ಇವರ ನೆನೆಪಿಗೆ ಈ ಕಾಣಿಕೆಯನ್ನು ಶ್ರೀ ಶಾರದೆಗೆ ಸಮರ್ಪಿಸಿರುವರು. ಇವರಿಗೆ ಆಡಳಿತ ಮಂಡಳಿಯ ಅಭಿನಂದನೆಗಳು.

### ವಿಜಯದಶಮಿಯ ಸ್ಪರ್ಧೆಗಳ ವಿಜೇತರಿಗೆ ಬಹುಮಾನ

ಶ್ರೀ ಶಾರದಾ ವೇದಿಕೆಯ ಅಧ್ಯಕ್ಷರಾದ ಶ್ರೀ ವೈ.ಮೋಹನ ರಾವ್ ಇವರು ತಮ್ಮ ಪತ್ನಿ ದಿವಂಗತ ಉಷಾ ರಾವ್‌ರ ಸ್ಮರಣಾರ್ಥ ಹಾಗೂ ನಮ್ಮ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್.ರಾವ್‌ರ ಧರ್ಮಪತ್ನಿ ಶ್ರೀಮತಿ ಸುನಂದ ಎಸ್.ರಾವ್‌ರವರು ವಿಜಯದಶಮಿಯಂದು ನಡೆದ ಎಲ್ಲಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನವನ್ನು ಪ್ರಾಯೋಜಿಸಿದ್ದಾರೆ. ಇವರಿಗೆ ಶ್ರೀ ಶಾರದೆಯು ಸಕಲೈಶ್ವರ್ಯಗಳನ್ನು ದಯಪಾಲಿಸಲೆಂದು ಆಡಳಿತ ಮಂಡಳಿ ಹಾರೈಸುತ್ತದೆ.

## ಶ್ರೀ ಸಿ.ಎಸ್.ರಾವ್‌ರಿಗೆ ಸನ್ಮಾನ



ಉಡುಪಿ ಜಿಲ್ಲೆಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಂಟಿ ಆಶ್ರಯದಲ್ಲಿ ಶ್ರೀ ಸಿ.ಎಸ್. ರಾಯರು ಉಡುಪಿ ಜಿಲ್ಲೆಯ ಹಿರಿಯ ನಾಗರಿಕರಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ವಿಶ್ವ ಹಿರಿಯನಾಗರಿಕರ ದಿನಾಚರಣೆಯಂದು (1-10-2015) ಎಮ್.ಜಿ.ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ಜರಗಿದ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಲಾಯಿತು. ಶ್ರೀ ಸಿ.ಎಸ್ ರಾಯರು ಉಡುಪಿ ಜಿಲ್ಲೆಯ ಹಿರಿಯ ನಾಗರಿಕ ವೇದಿಕೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಈ ಮೊದಲು ಬೆಂಗಳೂರಿನಲ್ಲಿ ಜರಗಿದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಅಧ್ಯಕ್ಷರಾಗಿಯೂ, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಸ್ಥಾಪಕ ಅಧ್ಯಕ್ಷರಾಗಿಯೂ, ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಮಂಗಳೂರಿನ ಸುಬ್ರಹ್ಮಣ್ಯ ಸಭಾ ಇದರ ಅಧ್ಯಕ್ಷರಾಗಿದ್ದಾರೆ. ಇವರು ಈಗ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿ ಇದರ ಸಲಹೆಗಾರರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಸಿ.ಎಸ್.ರಾಯರಿಗೆ ಶ್ರೀ ಶಾರದಾ ಬಳಗದ ಶುಭಾಶಯಗಳು.

## ಡಾ.ಎಂ ಸತ್ಯನಾಥ : ಹೆಬ್ಬೂರು ಮಠದ ಧರ್ಮಾಧಿಕಾರಿಯಾಗಿ ನೇಮಕ



ಶ್ರೀ ಶಂಕರಾಚಾರ್ಯ ಗುರುಪೀಠ ಪರಂಪರೆಯ ಘನ ಪುರೀ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠ, ಶ್ರೀ ಕಾಮಾಕ್ಷಿ ಶಾರದಾ ಪೀಠಂ, ಹೆಬ್ಬೂರು, ತುಮಕೂರು ಇದರ ಕಾಸರಗೋಡು ಪ್ರದೇಶದ ಧರ್ಮಾಧಿಕಾರಿಯಾಗಿ ಡಾ.ಎಂ ಸತ್ಯನಾಥನವರನ್ನು ತಾರೀಕು 24-09-2015ರಂದು ಹೆಬ್ಬೂರು ಶ್ರೀ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ನಿಯೋಜಿಸಿರುತ್ತಾರೆ.

ಕಾಸರಗೋಡಿನ ಮೇಲ್ಪರಂಬದಲ್ಲಿರುವ ಕಳನಾಡು ನರ್ಸಿಂಗ್ ಹೋಮ್‌ನ ಡಾ. ಸತ್ಯನಾಥರು ಜಿಲ್ಲಾ ಸ್ಥಾನಿಕ ಬ್ರಾಹ್ಮಣ ಸಭೆಯ ಅಧ್ಯಕ್ಷರಾಗಿದ್ದು, ಕಲನಾಡು ಮಾನ್ಯಂಗೋಡು ಮಹಾವಿಷ್ಣು ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿಯೂ, ಜಿಲ್ಲಾ ಐ.ಯಂ.ಎ. ಘಟಕ ಮತ್ತು ಲಯನ್ಸ್ ಕ್ಲಬ್‌ನ ಅಧ್ಯಕ್ಷ ಪದವಿಗಳಲ್ಲೂ ಕಾರ್ಯನಿರ್ವಹಣೆ ಮಾಡಿದ್ದಾರೆ. ಕಳೆದ 10 ವರ್ಷಗಳಿಂದ ಕಾಸರಗೋಡಿನ ಸತ್ಯಸಾಯಿ ಸೇವಾ ಮಂದಿರದಲ್ಲಿ ಎಲ್ಲಾ ಬುಧವಾರಗಳಲ್ಲಿ ಉಚಿತ ತಪಾಸಣೆ ಮತ್ತು ಚಿಕಿತ್ಸೆಗಳೊಂದಿಗೆ ವೈದ್ಯಕೀಯ ಶಿಬಿರಗಳನ್ನು ಡಾ ಸತ್ಯನಾಥ್ ಮತ್ತು ಅವರ ಪತ್ನಿ ಡಾ. ಗೀತಾ ನಡೆಸುತ್ತಿದ್ದಾರೆ. ಡಾ. ಶ್ರುತಿ ಎಂ. ಡಿ (ಡಾ. ರಾಘವೇಂದ್ರ ಎಂ. ಎಸ್ ಅವರ ಪತ್ನಿ), ಡಾ ಶ್ರೇಯಸ್ವಿ ಎಂ. ಡಿ ( ಡಾ. ಕಾರ್ತಿಕ್ ಎಂ.ಡಿ.ಅವರ ಪತ್ನಿ) ಮತ್ತು ಡಾ.ಶಾಶ್ವತ್ ಸತ್ಯನಾಥ್ ಎಂ.ಡಿ.-ಡಾ ಸತ್ಯನಾಥರ ಮಕ್ಕಳು. ಡಾ ಚೇತನ ಎಂ.ಎಸ್. ಇವರ ಸೊಸೆ.

## 75ನೇ ಹುಟ್ಟುಹಬ್ಬದ ಶುಭಾಶಯಗಳು




ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಇನ್ನಾ ರಾಜಗೋಪಾಲ ರಾವ್

ಶುಭಕೋರುವ :

ಶ್ರೀಮತಿ ರಚಿತ ಮತ್ತು ಶ್ರೀ ವಿಶ್ವಾಸ್ ರಾವ್, ಇನ್ನಾ
ಶ್ರೀಮತಿ ವಂದನಾ ಮತ್ತು ಶ್ರೀ ಕೃಷ್ಣ ರಾವ್, ಬೆಳ್ಮಣ್ಣು
ಶ್ರೀಮತಿ ಭಾವನಾ ಮತ್ತು ಶ್ರೀ ಉದಯ ಶಂಕರ್ ರಾವ್, ನಾರಾವಿ
ಮೊಮ್ಮಕ್ಕಳು : ಸಿದ್ಧಾಂತ್, ಸಂಜನಾ, ಅನಘಾ, ಸ್ನಿಗ್ಧಾ

## 80ನೇ ಹುಟ್ಟುಹಬ್ಬದ ಶುಭಾಶಯಗಳು



ಶುಭಕೋರುವ :

ಶ್ರೀಮತಿ ನಿರ್ಮಲ ಮತ್ತು ಶ್ರೀ ಪ್ರಸನ್ನ ಕುಮಾರ್
ಶ್ರೀಮತಿ ಜಯಶ್ರೀ ಮತ್ತು ಶ್ರೀ ನಿರಂಜನ
ಶ್ರೀಮತಿ ಡಾ। ಸಂಜಾತ ಮತ್ತು ಶ್ರೀ ರಾಜೇಶ
ಶ್ರೀಮತಿ ಸುಮನಾ ಮತ್ತು ಶ್ರೀ ರಾಮ ಎಲ್ಲಂಗಳ
ಶ್ರೀಮತಿ ಸವಿತ ಮತ್ತು ಶ್ರೀ ಸತ್ಯಜಿತ್ ರಾವ್
ಹಾಗೂ ಮೊಮ್ಮಕ್ಕಳು

## ಮಠಂತಬೆಟ್ಟು ದೇವಸ್ಥಾನದಲ್ಲಿ ಭಜನಾ ಕಾರ್ಯಕ್ರಮ



ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯಿಂದ ನವರಾತ್ರಿಯ ಪ್ರಥಮ ದಿನದಂದು ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಮಠಂತಬೆಟ್ಟು ಇಲ್ಲಿ ಭಜನಾ ಸೇವೆಯನ್ನು ನಡೆಸಲಾಯಿತು. ಸುಮಾರು 20ಕ್ಕೂ ಹೆಚ್ಚು ಸದಸ್ಯರು ಇದರಲ್ಲಿ ಪಾಲ್ಗೊಂಡಿದ್ದು ಶ್ರೀ ಕಾರ್ತಿಕ್ ರಾವ್ ಕುಡುಪು ತಬಲದಲ್ಲಿ ಸಹಕರಿಸಿದರು. ಶ್ರೀ ಸಭಾದ ಪದಾಧಿಕಾರಿಗಳಾದ ಶ್ರೀ ಕರುಣ ರಾವ್ ಬೆಳ್ಳೆ, ಶ್ರೀ ಅನಿಲ್ ರಾವ್ ಬಿ. ಎಸ್, ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ಸಂಯೋಜಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾ ದಂಪತಿಗಳು ರೂ.5000 ಗಳನ್ನು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ನೀಡಿದರೆ ಇತರ ಸದಸ್ಯರು ಹಲವಾರು ಸೇವೆಗಳನ್ನು ನಡೆಸಿ ಕೃತಾರ್ಥರಾದರು. ಶ್ರೀ ಕಾರ್ತಿಕ್ ಕುಡುಪು ತಬಲಾದಲ್ಲಿ ಸಹಕರಿಸಿದರು.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಕಾಸರಗೋಡು : ವಾರ್ಷಿಕ ಸಮಾವೇಶ-2015

■...3ನೇ ಪುಟದಿಂದ



ಪೂರ್ವಾಹ್ನ ನಡೆದ ವಾರ್ಷಿಕ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಎಂ. ಶುಭಕರ ಶ್ಯಾನುಭಾಗ್ ಲೆಕ್ಕಪತ್ರಗಳನ್ನು ಮಂಡಿಸಿದರು. ಕಾರ್ಯದರ್ಶಿ ಮನೋಹರ್ ವರದಿಯನ್ನು ಮಂಡಿಸಿದರು. ಶ್ರೀಮತಿ ಮಾಲತಿ ಜಗದೀಶ್ ಮಹಿಳಾ ಘಟಕದ ವರದಿಯನ್ನು ಮಂಡಿಸಿದರು. ನೂತನ ಅಧ್ಯಕ್ಷರಾಗಿ ಶ್ರೀ ಸುಕುಮಾರ ಆಲಂಪಾಡಿ, ಕಾರ್ಯದರ್ಶಿಯಾಗಿ ಶ್ರೀಯುತ ವಸಂತರಾಜ ಪಟ್ಲ, ಕೋಶಾಧಿಕಾರಿಯಾಗಿ ಡಾ। ಸತ್ಯನಾಥ್‌ರನ್ನು ಆರಿಸಲಾಯಿತು. ಡಾ। ಶ್ರಿ ಪಿ.ಪಿ.ರಾವ್, ಡಾ। ಕೆ.ಕೆ ಶ್ಯಾನುಭಾಗ್, ಶ್ರೀ ರಾಮ ಎಲ್ಲಂಗಳ, ಶ್ರೀ ರಾಜೇಂದ್ರ ಬಜಕೂಡ್ಲು, ಶ್ರೀ ಕೆ.ಜಿ ಶ್ಯಾನುಭಾಗ್, ಪ್ರೊ। ಶ್ರೀನಾಥ ಎ., ಶ್ರೀಮತಿ ಕೃಪಾ ಜಿ.ಶ್ಯಾನುಭಾಗ್, ಶ್ರೀಮತಿ ವಿಜಯ ಲಕ್ಷ್ಮೀ ಶ್ಯಾನುಬಾಗ್, ಶ್ರೀಮತಿ ಪ್ರಭಾ ರಮೇಶ್, ಕುಮಾರಿಯರಾದ ವರ್ಣ, ವಿಶಾಖ, ಮೈತ್ರಿ, ಶ್ರೀಮತಿ ಸುಮಂಗಲಾ ಮನೋಹರ ಮೊದಲಾದವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನೃತ್ಯ, ಭಾವಗೀತೆ ಗಾಯನ, ಏಕಪಾತ್ರಾಭಿನಯ, ಹಾಸ್ಯ ರಸಾಯನ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನೂ ಆಯೋಜಿಸಲಾಗಿತ್ತು.

**-ಮನೋಹರ್,** ಅಸಿಸ್ಟೆಂಟ್ ಮೆನೇಜರ್, ಕೇರಳ ಗ್ರಾಮೀಣ ಬ್ಯಾಂಕ್, ಕಾಸರಗೋಡು

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಾಡಹಬ್ಬ





ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಇತ್ತೀಚೇಗೆ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಲಲಿತಾ ಸಹಸ್ರನಾಮ ಪಾರಾಯಣದೊಂದಿಗೆ ಕಾರ್ಯಕ್ರಮಗಳು ಆರಂಭಗೊಂಡವು. ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ, ಛದ್ಮವೇಷ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆಗಳು ನಡೆದವು ಶ್ರೀಮತಿ ರಾಜೇಶ್ವರಿ, ಶ್ರೀ ವೇಣುಗೋಪಾಲ್ ಶಾನುಭೋಗ್, ಶ್ರೀ ರಘುವೀರ ಪೆರ್ಡೂರ್, ಶ್ರೀ ಕಾರ್ತಿಕ್ ರಾವ್ ಕುಡುಪು ಮತ್ತು ಶ್ರೀ ಹರೀಶ್ ಕುಮಾರ್ ಕುತ್ತಾರು ತೀರ್ಪುಗಾರರಾಗಿ ಸಹಕರಿಸಿದರು. ಕಡೆಂಜಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನದ ವತಿಯಿಂದ ಸುಮಾರು 50ಕ್ಕೂ ಹೆಚ್ಚಿನ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಲೆಕ್ಕ ಪರಿಶೋಧಕ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ಕೂಡ್ಲು ಶ್ರೀ ವಿಷ್ಣು ಶ್ಯಾನುಭೋಗರು ವಿದ್ಯಾರ್ಥಿ ವೇತನವನ್ನು ನೀಡಿದರು. ಮಧ್ಯಾಹ್ನ ಸದನದ ಕಲಾವಿದರಿಂದ "ಪಾವನ ಪಕ್ಷಿ" ಎಂಬ ನೃತ್ಯ ರೂಪಕ ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯಿಂದ "ಜಾಂಬವತಿ ಕಲ್ಯಾಣ" ಯಕ್ಷಗಾನ ಪ್ರದರ್ಶನ ನಡೆಯಿತು. ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್ ಕಾರ್ಯಕ್ರಮ ಸಂಯೋಜಿಸಿದರೆ ಯುವ ವೇದಿಕೆಯ ಶ್ರೀ ಸುರೇಶ ಕಡಬ ಹಾಗೂ ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರು.

## ಪ್ರತಿಭಾ ಪುರಸ್ಕಾರ



ದಿನಾಂಕ : 11-10-2015 ರವಿವಾರದಂದು ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ಜರಗಿದ ನಾಡಹಬ್ಬದಂದು ನಮ್ಮ ಸಮಾಜದ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ 51 ವಿದ್ಯಾರ್ಥಿಗಳನ್ನು ದಿವಂಗತ ಕಡಂಜೆ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ಸ್ಥಾಪಕರಾದ ಕೆ.ಸದಾಶಿವ ಶಾಸ್ತ್ರಿ ದಂಪತಿಗಳು ಸಮ್ಮಾನಿಸಿದರು.

## ಚಿಣ್ಣರ ಅಂಗಳ



ಕೀರ್ತಿವರ್ಧನ್, 6ನೇ ತರಗತಿ, ಇಂದ್ರಾಳಿ ಇಂಗ್ಲೀಷ್ ಮೀಡಿಯಮ್ ಸ್ಕೂಲ್





ನಿಹಾರಿಕಾ ರಾವ್
2ನೇ ತರಗತಿ,
ಶೇರ್ವುಡ್ ಹೈಸ್ಕೂಲ್,
ಬೆಂಗಳೂರು





ಅನರ್ಘ್ಯ
9ನೇ ತರಗತಿ,
ಆರ್ಮಿ ಸ್ಕೂಲ್
ಬೆಂಗಳೂರು

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org